ಶ್ರೀ ಎ. ಲಕ್ಷ್ಮೀಸಾಗರ್ (ಶಿಕ್ಷಣ ಸಚಿವರ ಪರವಾಗಿ).— ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಸರ್ಕಾರಿ ಕಿರಿಯ ಮಹಾ ವಿದ್ಯಾಲಯ ಬೆಳ್ಳಾರೆ ಮತ್ತು ಸರ್ಕಾರಿ ಕಿರಿಯ ಕಾಲೇಜು ಸುಳ್ಯ ಈ ಕಾಲೇಜುಗಳಲ್ಲಿ ಸಿ ಪಿ ಎಡ್ ಪಡೆದ ದೈಹಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಮೇಲ್ಕಂಡ ಕಾಲೇಜುಗಳು ಸಂಯುಕ್ತ ಕಿರಿಯ ಕಾಲೇಜಂಗಳಾದುದರಿಂದ ಪ್ರೌಢಶಾಲೆ ಹಂತದಲ್ಲಿ ದೈಹಿಕ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಈ ಕಾಲೇಜುಗಳಿಗೆ ಬಿ ಪಿ ಎಡ್ ತರಬೇತಿ ಹೊಂದಿದ ಶಿಕ್ಷಕರುಗಳು ಹುದ್ದೆಯನ್ನು (ಗ್ರೇಡ್-೧) ಮಂಜೂರು ಮಾಡಬೇಕಾಗಿದೆ. ಇದರ ಬಗ್ಗೆ ಮಾಹಿ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

೨-೦೦ ಪಿ. ಎಂ.

ಬಿಜಾಪುರ ಜಿಲ್ಲೆಯ ಜಮಖಂಡಿ, ಇಂಡಿ, ಸಿಂಧಗಿ ತಾಲ್ಲೂಕುಗಳ ರೈತರ ಬಾವಿಗಳಿಗೆ ವಿದ್ಯುತ್ ಒದಗಿಸುವುದಂ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) — ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಜಮಖಂಡಿ, ಇಂಡಿ, ಸಿಂಧಗಿ ಮತ್ತು ಇತರ ತಾಲ್ಲೂಕುಗಳಲ್ಲಿ ೪-೫ ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ಅಲ್ಲಿಯ ರೈತರು ಬಾವಿಗಳಲ್ಲಿ ನೀರು ಪಡೆಯದೆ ಇದ್ದು ವಿದ್ಯುತ್ ಉಪಯೋಗಿಸಿಲ್ಲದಿದ್ದರೂ ಸ್ವಾವಿರಾರು ರೂಪಾಯಿಗಳಷ್ಟು ಬಿಲ್ಲುಗಳನ್ನು ವಿದ್ಯುತ್ ಇಲಾಖೆ ಕಳುಹಿಸಿದೆ. ಕಳೆದ ಒಂದು ವರ್ಷದಿಂದ ಆ ಭಾಗದ ರೈತರು ಬಡ್ಡಿ ಮತ್ತು ದಂಡದ ಬಡ್ಡಿ ಸೇರಿಸಿ ಒಬ್ಬೊಬ್ಬ ರೈತನಿಗೆ ಕೆ.ಇ.ಬಿ. ಯಿಂದ ಸಾವಿರಾರು ರೂಪಾಯಿಗಳ ಬಿಲ್ಲನ್ನು ಕಳುಹಿಸಿದ್ದು ಈಗ ಅಲ್ಲಿ ಬಾವಿಗಳಲ್ಲಿ ನೀರಿದ್ದು ವಿದ್ಯುತ್ ಉಪಯೋಗಿಸಿ ಅಲ್ಪ ಸ್ವಲ್ಪ ಬೆಳೆ ಬೆಳೆಯುವ ರೈತರಿಗೆ ಈಗ ಕೆ.ಇ.ಬಿ.ಯವರು ರೈತರ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ನಿಲ್ಲಿಸಿರುತ್ತಾರೆ. ಇದರಿಂದ ಕೋಟ್ಯಾಂತರ ರೂಪಾಯಿ ಬೆಳೆ ನಾಶವಾಗುವುದರಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಿ ಹಳೆಯ ವಿದ್ಯುತ್ ಬಿಲ್ ವಜಾ ಮಾಡಿ ಈಗ ನಿಲ್ಲಿಸಿರುವ ವಿದ್ಯುತ್ ಸರಬರಾಜು ಪೂರೈಸುವಂತೆ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.— ಈಗ ವಿಧೇಯಕಗಳನ್ನು ತೆಗೆದುಕೊಳ್ಳಿರಿ.

ಶಾಸನ ರಚನಾ ಕಾರ್ಯ ಕಲಾಪಗಳು

೧೯೮೯ನೇ ಇಸವಿಯ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ೧೯೮೯ನೇ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ೧೯೮೯ನೇ ಇಸವಿಯ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕದಲ್ಲಿ ಮುಖ್ಯವಾದ ವಿಷಯ ಏನು ಎಂದರೆ, ಭೂ ಸ್ವಾಧೀನ ಮಾಡುವ ಪ್ರಿಲಿಮಿನರಿ ನೋಟಿಫಿಕೇಷನ್ ಮತ್ತು ಫೈನಲ್ ನೋಟಿಫಿ ಕೇಷನ್ ಕೊಡತಕ್ಕ ಸಮಯದಲ್ಲಿ ಕಾನೂನು ಪ್ರಕಾರ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಅವುಗಳಿಗೆ ಸಂಬಂಧಪಟ್ಟಂತೆ ಎಲ್ಲಾ ವಿವರಗಳನ್ನು ಪತ್ರಿಕೆಗಳಲ್ಲಿ ಜಾಹಿರಾತು ಮಾಡಬೇಕೆಂದು ಇದೆ. ಇದರಲ್ಲಿ ವಿಪರ್ಯಾಸ ಏನೆಂದರೆ, ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಏನುಪರಿಹಾರ ಕೊಡತ್ತೇವೆಯೋ ಅದಕ್ಕಿಂತ ಹೆಚ್ಚು ಹಣವನ್ನು ಪತ್ರಿಕೆಗಳಲ್ಲಿ ಇದರ ಬಗ್ಗೆ ಜಾಹಿರಾತು ಕೊಡುವುದಕ್ಕೆ ವಿನಿಯೋಗಿಸುತ್ತಿತ್ತು.

ಈ ರೀತಿ ಖರ್ಚಾಗುವ ಹಣವನ್ನು ತಪ್ಪಿಸಬೇಕೆನ್ನುವ ದೃಷ್ಟಿಯಿಂದ ಇನ್ನು ಮುಂದೆ ಎಲ್ಲಾ ವಿವರಗಳನ್ನು ಜಾಹೀರಾತು ಮಾಡದೆ ಜಸ್ಟ್ ಮಾತ್ರ ಅಂದರೆ ಸಾರಾಂಶವನ್ನು ಮಾತ್ರ ಜಾಹಿರಾತು ಕೊಡುವುದು ಹಾಗೂ ಸಂಬಂಧಪಟ್ಟ ಊರಿನಲ್ಲಿರತಕ್ಕ ಜನರಿಗೆ ತಿಳಿಸುವುದು, ಭೂವಿನಿಯಂತ್ರಣ ಕಾಯ್ದೆಯಿಂದ ವಿನಾಯಿತಿಗೊಳಿಸುವ ಬಗ್ಗೆ ನೋಟೀಸ್ ಕೊಡತಕ್ಕಂಥ ಒಂದು ತಿದ್ದುಪಡಿಯನ್ನು ಈ ವಿಧೇಯಕದಲ್ಲಿ ತಿಳಿಸಲಾಗಿದೆ. ಬಹಳ ವರ್ಷಗಳ ಹಿಂದೆಯೇ ಇದನ್ನು ಮಾಡಬೇಕಾಗಿತ್ತು. ಈ ವಿಧೇಯಕದ ರೀತಿಯಲ್ಲಿ ಕೇರಳ ರಾಜ್ಯದವರು, ತಮಿಳುನಾಡು ರಾಜ್ಯದವರು ಮತ್ತು ಆಂಧ್ರಪ್ರದೇಶದವರು ಮಾಡಿದ್ದಾರೆ. ಈ ವಿಧೇಯಕವು ತುಂಬಾ ಅವಶ್ಯಕವಾಗಿದೆ. ಅನಾವಶ್ಯಕವಾಗಿ ಖರ್ಚ ಮಾಡತಕ್ಕ ಹಣವನ್ನು ಇದರಿಂದ ಉಳಿಸಬಹುದು ಆದ್ದರಿಂದ ಸನ್ಮಾನ್ಯ 'ಸದಸ್ಯರು' ಈ ವಿಧೇಯಕಕ್ಕೆ ಬೆಂಬಲಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.— ಮಾನ್ಯ ಮಂತ್ರಿಗಳು ಈ ಕಾನೂನು ತಿದ್ದುಪಡಿಯನ್ನು ಯೋಗ್ಯವಾಗಿ ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ಇದರ ಜೊತೆಗೆ ಇನ್ನೂ ಕೆಲವು ಜಿಸ್ಟ್ ಗಿಸ್ಟ್ ಕೊಡುತ್ತೇವೆಂದು ಹೇಳಿದ್ದಾರೆ. ಕೆಲವರು ಏನು ಇಲ್ಲದ ಪತ್ರಕರ್ತರನ್ನು ತಮಗೆ ಗೊತ್ತಿದ್ದ ಹಾಗೆ ಲಕ್ಷಗಟ್ಟಲೆ ಕೋಟಿಗಟ್ಟಲೆ ಹಣವನ್ನು ಲ್ಯಾಂಡ್ ಅಕ್ವಿಸಿಷನ್ ನೋಟಿಫಿಕೇಷನ್ನಿಂದ ಮಾಡಿದ್ದಾರೆ, ಈಗ ಅದನ್ನು ಬಂದ್ ಮಾಡಿದ್ದಾರೆ. ಇನ್ನೂ ಸ್ವಲ್ಪ ಸ್ವಲ್ಪ ಜಿಸ್ಟ್ ಕೊಡುತ್ತೇವೆಂದು ಹೇಳಿದ್ದಾರೆ. ಜಿಸ್ಟ್ ಜರೂರು ಇಲ್ಲ. ಮೂಲೀಕನಿಗೂ ಟೆನೆಂಟ್‌ಗೂ ಕೊಟ್ಟ ನಂತರ ಆದಕ್ಕೆ ಸರ್ಕಾರದಿಂದ ಏಕೆ ಹಣ ಖರ್ಚು ಮಾಡುತ್ತೀರಿ. ಈ ತಿದ್ದುಪಡಿಯೊಳಗೆ ಸಲಹೆ ಮಾಡುವುದಿದ್ದರೆ ಯಾವಾಗಲೂ ಎಲ್ಲಾ ಪತ್ರಿಕೆಗಳಿಗೆ ಒಂದೇ ತರವಾದ ರೀತಿಯಲ್ಲಿ ನೋಡುತ್ತೇವೆ, ಅನಿವಾರ್ಯ ಇದ್ದಷ್ಟನ್ನು ಮಾತ್ರ ಪ್ರಕಟಣೆ ಮಾಡುತ್ತೇವೆ. ಹೆಚ್ಚು ಹಣ ಹಾಳು ಮಾಡಲಿಕ್ಕೆ ಹೋಗುವುದಿಲ್ಲ ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡಬೇಕೆಂದು ಕೇಳಿ ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ಈ ವಿಧೇಯಕಕ್ಕೆ ನಾನು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಇನ್ನು ಮುಂದೆ ಜಿಸ್ಟ್ ಮಾತ್ರ ಪ್ರಕಟಿಸುತ್ತೇವೆಂದು ಹೇಳಿದ್ದಾರೆ. ಈ ತಿದ್ದುಪಡಿ ವಿಧೇಯಕದಲ್ಲಿ ಜಿಸ್ಟ್ ಎನ್ನುವ ಪದವನ್ನೇ ಬಿಟ್ಟು ಬಿಟ್ಟಿದ್ದಾರೆ. ಅಮೆಂಡ್‌ಮೆಂಟ್ ಸೆಕ್ಷನ್ ಓರಲ್ಲೂ ಜಿಸ್ಟ್ ಎನ್ನುವ ಪದವನ್ನು ಸೇರಿಸಬೇಕು. ಇವರು ಏನಂ ಉದ್ದೇಶದಿಂದ ಅಮೆಂಡ್‌ಮೆಂಟ್‌ನ್ನು ತಂದಿದ್ದಾರೋ ಅದನ್ನೇ ಬಿಟ್ಟು ಪ್ರಿಂಟ್ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— I am sorry to interfere ಮಾನ್ಯ ಅಧ್ಯಕ್ಷರೇ. ಅಮೆಂಟ್‌ಮೆಂಟ್‌ನ ಕಾಪಿ ನಮ್ಮಲ್ಲಿ ಇಲ್ಲ. ಅಮೆಂಡ್‌ಮೆಂಟ್ ಕಾಪಿ ನಮ್ಮಲ್ಲಿ ಇಲ್ಲವೆಂದರೆ ನಾವು ಹೇಗೆ ಕಾಮೆಂಟ್ ಮಾಡುವುದು?

ಶ್ರೀ ಎ. ಲಕ್ಷ್ಮೀಸಾಗರ್.— ಕಾಪಿಗಳನ್ನು ಸರ್ಕುಲೇಟ್ ಮಾಡಲಾಗಿರುತ್ತದೆ. ನಮ್ಮ ರೂಲ್ಸ್ ಪ್ರಕಾರ ಅಮೆಂಡ್‌ಮೆಂಟ್ ಕಾಪಿಗಳನ್ನು ಬಹಳ ಮೊದಲೇ ಕೊಡಬೇಕೆಂದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೀವು ಅಮೆಂಡ್‌ಮೆಂಟ್‌ನ್ನು ಅಡ್ಮಿಟ್ ಮಾಡಿದ ಮೇಲೆ ಅದರ ಕಾಪಿಯನ್ನು ನಮಗೆ ಮೊದಲೇ ಕಳುಹಿಸಿಕೊಡಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.— ಅಮೆಂಡ್‌ಮೆಂಟ್‌ನ್ನು ನಾನು ಅಡ್ಮಿಟ್ ಮಾಡಿಕೊಳ್ಳುತ್ತೇನೆಂದು ಹೇಳಿಲ್ಲ, ಈಗ ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ಏನು ಅಮೆಂಡ್‌ಮೆಂಟ್ ಕಳುಹಿಸುತ್ತಾರೋ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಲ್ಯಾಂಡ್ ಅಕ್ವಿಜೇಶನ್ ಅಮೆಂಡ್‌ಮೆಂಟ್ ಬಿಲ್‌ಗೆ ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದರ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡಲಿಕ್ಕೆ ಇಲ್ಲದಿದ್ದರೂ ಕೂಡ ಈಗ ಮಾಡುತ್ತಿರುವ ಅಡ್ವರ್‌ಟೈಸ್‌ಮೆಂಟನ್ನು ಫ್ಯಾಕ್ಟರೈಸ್ ಮಾಡುವ ರೀತಿಯಲ್ಲಿ ಮಾಡಬಾರದು ಸಚಿವರು ಹೇಳಿದ ಹಾಗೆ ಪತ್ರಿಕೆಗಳಲ್ಲಿ ಜಿಸ್ಟ್ ಕೊಡುವುದು ಪ್ರಶ್ನಾತೀತವಾದ ವಿಷಯ. ಈ ಬಗ್ಗೆ ಎಕ್ಸಿಸ್ಟಿಂಗ್‌ಲಾ ಇದ್ದರೂ ಕೂಡ ರೂಲ್ಸ್‌ನಲ್ಲಿ ಅದನ್ನು ತರಬೇಕು ಸರ್ಕುಲೇಷನ್ ಏಕೆಂದರೆ ಜಿಲ್ಲಾ ಪತ್ರಿಕೆಗಳಾಗಲಿ ಪ್ರಾದೇಶಿಕ ಪತ್ರಿಕೆಗಳಾಗಲಿ ಅವರಿಗೆ ಇಂತಿಷ್ಟು ಸರ್ಕುಲೇಷನ್ ಇರಬೇಕೆಂದು ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಇದರಿಂದ ಜನಗಳಿಗೂ ಪ್ರಯೋಜನವಾಗುವುದಿಲ್ಲ. This itself will become a racket. Again you use

it as an instrument for patronising. ಲ್ಯಾಂಡ್ ಅಕ್ವಿಸಿಶನ್ ಬಗ್ಗೆ ಮತ್ತೊಂದು ವಿಚಾರವನ್ನು ನಾವು ಮಾಡಬೇಕಾಗುತ್ತದೆ ಅನೇಕ ಕಡೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಸ ಬಗ್ಗೆ ಲ್ಯಾಂಡ್ ಅಕ್ವಯರ್ ಮಾಡುತ್ತಾರೆ. ಸಂಬಂಧಪಟ್ಟವರಿಗೆ ಕೊಡುವ ಪರಿಹಾರವನ್ನು ಫಿಕ್ಸ್ ಮಾಡುತ್ತಾರೆ. ಆನಂತರ ಅವರು ಎನ್‌ಹ್ಯಾನ್ಸ್‌ಮೆಂಟಿಗೆ ಅಪ್ಲಿಕೇಷನ್ ಹಾಕುತ್ತಾರೆ. ಇದರ ಮೇಲೆ ಕೆಲವು ರೈತರು ಸಾಲವನ್ನು ಪಡೆದುಕೊಳ್ಳುತ್ತಾರೆ ಆದರೆ ಅದೇ ರೈತನಿಗೆ ಎನ್‌ಹಾನ್ಸ್‌ಮೆಂಟ್ ಸಿಕ್ಕುವಾಗ ಆಗುವ ವಿಳಂಬದಿಂದಾಗಿ ಅವನು ಸಾಲಗಾರನಾಗಿ ಹೋಗಿರುತ್ತಾನೆ. ಹೀಗಾಗಿ ಅವನಿಗೆ ಜಮೀನೂ ಇಲ್ಲ. ಆದರ ಹಣವೂ ಇಲ್ಲ ಎಂಬ ಪರಿಸ್ಥಿತಿ ಉಂಟಾಗುತ್ತದೆ. ಆದಂದರಿಂದ ಈ ಎನ್‌ಹ್ಯಾನ್ಸ್‌ಮೆಂಟ್ ವಿಚಾರವನ್ನು ಬರೀ ಸಿವಿಲ್‌ಕೋರ್ಟ್‌ಗೆ ಹಾಕುವ ಬದಲು ಅದನ್ನು ಒಂದು ಸಣ್ಣ ಟ್ರಿಬ್ಯುನಲ್ ರೂಪದಲ್ಲಿ ಸ್ವೀಕಾರ ಮಾಡಿಕೊಂಡು ಅದಕ್ಕೆ ಸರಕಾರವೇ ಒಂದು ಲೀಗಲ್ ಏಡ್ ಕೊಟ್ಟು ಮಾಡುವುದೂ ಒಳ್ಳೆಯದು. ಇಲ್ಲದಿದ್ದರೆ ಇದರಿಂದಾಗಿ ಒಂದೇ ದೊಡ್ಡ ಫ್ರಾಡ್ ಆಗುವುದಕ್ಕೆ ಅಪಕಾಶವಾಗುತ್ತದೆ. ಈ ಮಾತನ್ನು ನಾನು ವಕೀಲ ವೃತ್ತಿಯನ್ನು ಮಾಡಿದವನಾಗಿರುವುದರಿಂದ ಹೇಳುತ್ತಿದ್ದೇನೆ. ಈಗ ರೈತರಿಗೆ ಕೋರ್ಟ್‌ಮೂಲಕ ಎನ್‌ಹಾನ್ಸ್ ಸಿಕ್ಕಿದರೂ ಕೂಡ ನಿಜವಾಗಿ ಅದರ ಲಾಭ ಅವನಿಗೆ ಸಿಗುತ್ತಾ ಇಲ್ಲ. ರೈತರು ಸಾಲಗಾರನ್ನಾಗಿ ಹೋಗುವ ಸಂದರ್ಭಗಳೇ ಹೆಚ್ಚು. ಇಂಥ ರೀತಿಯಲ್ಲಿ ಫ್ರಾಡ್ ಲ್ಯಾಂಡ್ ಅಕ್ವಿಸಿಶನ್‌ನಲ್ಲಿ ನಡೆಯುತ್ತಾ ಇದೆ. ಆದಕ್ಕಾಗಿ ಈ ಒಂದು ಕ್ರಮವನ್ನು ನಿಲ್ಲಿಸತಕ್ಕಂಥ ಕಾರ್ಯಕ್ರಮವನ್ನು ತಂದರೆ, ಮತ್ತು ಸಿವಿಲ್‌ಜಡ್ಜ್ ಒಬ್ಬರಿಗೆ ಕೊಡುವ ಬದಲು ಒಂದು ಸಣ್ಣ ಟ್ರಿಬ್ಯುನಲ್ ಕಾನ್ಸ್ಟಿಟ್ಯೂಟ್ ಮಾಡಿ ಅದಕ್ಕೆ ನಿರ್ವಹಿಸಿದರೆ ಸೂಕ್ತವಾಗುತ್ತದೆ, ಸೆಕ್ಷನ್ ೧೮೮ ಪ್ರಕಾರ ಬಹಳಷ್ಟು ಇಲ್ಲಿ ಬೇಕಾದಷ್ಟು ಸಾರಿ ಅರ್ಬಿಟ್ರರಿ ಆಗಂತ್ತವೆ. ಈ ಕಾರಿತ ಉಚ್ಚ ನ್ಯಾಯಾಲಯ ಕೂಡ ಎಷ್ಟೋ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆ ಇದರಿಂದಾಗಿ ಎಷ್ಟೋ ಸಿವಿಲ್ ಜಡ್ಜ್‌ಗಳು ಡಿಸ್‌ಮಿಸ್ ಆಗಿದ್ದಾರೆ. ಈಗ ಇರುವ ರೀತಿಯ ಪ್ರಕಾರ ಮಿಸ್‌ಯೂಸ್ ಮತ್ತು ಎಕ್ಸ್‌ಪ್ಲಾಯಿಟೇಷನ್ ಆಗುತ್ತಾ ಇದೆ ಅದನ್ನು ತಡೆಹಾಕುವುದಕ್ಕೆ ಒಂದು ಕಾನೂನು ತರುವುದು ಸೂಕ್ತವಾದೀತು. ಈ ವ್ಯವಸ್ಥೆಗೆ ಒಂದು ಸಣ್ಣ ಟ್ರಿಬ್ಯುನಲ್ ಮಾಡಬೇಕು. ಹಾಗೆ ಮಾಡುವುದನ್ನು ಬಿಟ್ಟು ಒಬ್ಬ ಜಡ್ಜ್‌ಗೆ ಅಧಿಕಾರವನ್ನು ಕೊಟ್ಟರೆ ಅದರಿಂದ ಜನರಿಗೆ ಸರಿಯಾದ ನ್ಯಾಯ ಸಿಗುವುದಿಲ್ಲ. ಅಥವಾ ಇಲ್ಲಿ ಬೇರೆ ಕೇಸ್‌ನ ರೀತಿಯಲ್ಲಿ ವ್ಯವಹರಿಸಿದರೆ ಸರಿಯಾದ ಅನುಕೂಲ ರೈತರಿಗೆ ಖಂಡಿತಾ ಸಿಗುವುದಿಲ್ಲ ಮತ್ತು ಶೋಷಣೆಗೆ ಒಳಗಾಗುತ್ತಾನೆ. ಈ ಬಗ್ಗೆ ಲ್ಯಾಂಡ್ ಅಕ್ವಿಸಿಶನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದರೆ ಒಳ್ಳೆಯದು ಎಂದು ಕಾಣುತ್ತದೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) —ಈ ಅಮೆಂಡ್‌ಮೆಂಟ್ ಚಿಕ್ಕದಾದರೂ ಕೂಡ ಇದರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕು ಜೊತೆಗೆ ಇದರ ಬದಲು ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಮಗ್ರ ಲ್ಯಾಂಡ್ ಅಕ್ವಿಜಿಷನ್ ಆಕ್ಟಿಗೇ ಅಮೆಂಡ್‌ಮೆಂಟ್ ತರಬೇಕಾಗಿತ್ತು. ಕಾರಣ ಏನೆಂದರೆ ಅನೇಕ ಲ್ಯಾಂಡ್ ಅಕ್ವಿಜಿಷನ್ ಕೇಸ್‌ನಲ್ಲಿ ಆಫೀಸರ್ ಅಸಿಸ್ಟೆಂಟ್ ಕಮಿಷನರ್ ಇರಬಹುದು ಅಥವಾ ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಅವರುಗಳು ತೀರ್ಮಾನ ತೆಗೆದುಕೊಳ್ಳುತ್ತಾರೆ. ಆಪಾಗ ಏನಾಗುತ್ತದೆ ಎಂದರೆ ಜಮೀನು ಕಳೆದುಕೊಳ್ಳುವ ಕಾಂಪನ್‌ಸೇಷನ್ ಪಡೆಯುವ ಬಡ ರೈತ ಯಾರಿರುತ್ತಾನೋ ಅವರು ಅಡ್ವೊಕೇಟ್ಸ್‌ಗೆ ಇಡೀ ಕೇಸನ್ನು ಒಪ್ಪಿಸಿಬಿಟ್ಟಿರುತ್ತಾರೆ. ನಮಗೆಲ್ಲಾ ಗೊತ್ತಿರುವಂತೆ ಅನೇಕ ವಕೀಲರು ಆದಕ್ಕೆ ಫೀಸ್ ಕೇಳದೆ ಪರ್ಸೆಂಟೇಜ್ ಕೇಳುತ್ತಾರೆ. ಇವರ ಕೆಲಸವೇನೆಂದರೆ ಬರೀ ರೆಪ್ರೆಸೆಂಟ್ ಮಾಡುವುದು ಅಷ್ಟೆ ಇವೆಲ್ಲಾ ಸಿವಿಲ್ ಕೇಸ್ ಮರ್ಡರ್ ಕೇಸ್ ಅಥವಾ ಪ್ರಾಪರ್ಟಿ ಕೇಸ್ ತರಹವಲ್ಲ ಫೈಲ್ ಬಿಲ್ಡ್ ಮಾಡಬೇಕಾಗಿಲ್ಲ. ಬೆವರು ಹರಿಸಬೇಕಾಗಿಲ್ಲ. ಬರೀ ಒಂದು ರೆಪ್ರೆಸೆಂಟ್ ಮಾಡಿದರೆ ಸಾಕು ಅದರ ಮೇಲೆಯೇ ಅವಾರ್ಡ್ ಪಾಸ್ ಆಗುತ್ತದೆ. ಅನೇಕ ವಕೀಲರು ಇದನ್ನು ಅರಿತುಕೊಂಡು ರೈತರಿಂದ ಫೀಸ್ ಕೇಳದೆ ಬರುವ ಕಾಂಪನ್‌ಸೇಷನ್‌ನಲ್ಲಿ ೩೦, ೪೦, ೫೦, ಪರ್ಸೆಂಟ್ ಯಾಥಾನುಸಾರ ಕೇಳಿ ರೈತರ ಮುಗ್ಧತೆಯನ್ನು ಶೋಷಣೆ ಮಾಡುತ್ತಾರೆ. ಇದೆಲ್ಲಾ ನಮ್ಮ ಕಡೆ ನಾರಾಯಣಪುರ, ಕೃಷ್ಣಾಯೋಜನೆಗಳು, ಹೇಮಾವತಿ, ಭೀಮರಾಯನಗುಡಿ ಕಟ್ಟುವಾಗ ನಾವೆಲ್ಲಾ ನೋಡಿರುವುದು. ಅವರು ಮ್ಯಾಜಸ್ಟ್ರೇಟ್ ಕೋರ್ಟಿನಲ್ಲಿ ಆರ್ಗ್ಯುಮೆಂಟೂ ಮಾಡುವುದಿಲ್ಲ. ಎಷ್ಟೋ ಸಲ ಅವರಿಗೆ ರಿಟರ್ನ್ ಸ್ಟೇಟ್‌ಮೆಂಟ್ ಕೂಡ ಬರೆಯುವುದಕ್ಕೆ ಬರುವುದಿಲ್ಲ. ಎ. ಸಿ. ಜೊತೆಯಲ್ಲಿ ಹೋಡಾಣಿಕೆ ಮಾಡಿಕೊಂಡರೆ ಸಾಕು. ಒಬ್ಬ ಕೇಪ್‌ವರ್ಕರ್ ಒಬ್ಬ ಲ್ಯಾಂಡ್ ಅಕ್ವಿಜಿಷನ್ ಆಫೀಸರ್ ಇವರಿಷ್ಟು ಸೇರಿ ರೈತರನ್ನು ಶೋಷಣೆ ಮಾಡಿ ಸರ್ಕಾರದ ಕೋಟ್ಯಾಂತರ ರೂಗಳನ್ನು ಇವರು ನುಂಗುತ್ತಾರೆ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗಿತ್ತು. ಎಕ್ಸ್‌ಪ್ಲಾಯಿಟೇಷನ್ ಆಗುತ್ತಿದೆ.

ರೈತರು ಭೂಮಿ ಕಳೆದುಕೊಳ್ಳುವ ಜೊತೆಗೆ ದುಡ್ಡನ್ನು ಕಳೆದುಕೊಳ್ಳುತ್ತಾರೆ ಈ ಸರ್ಕಾರ ಎಲ್ಲಿ ಶೋಷಣೆಯಾಗುತ್ತದೋ ಅಲ್ಲಿ ಸುಧಾರಣೆ ಮಾಡುತ್ತದೆನ್ನುವ ಅಪೇಕ್ಷೆ ನಮಗಿತ್ತು. ತಮ್ಮದೂ ರೈತಕುಟುಂಬವಾದ್ದರಿಂದ ತಮಗೂ ಅದೇ ಅಪೇಕ್ಷೆಯಿತ್ತು. ಆದರೆ ಸರ್ಕಾರ ಅದಕ್ಕೆ ಸಂಬಂಧಿಸಿದಂತೆ ಯಾವ ತಿದ್ದುಪಡಿಯನ್ನೂ ತರಲಿಲ್ಲ.

ಇವತ್ತು ಅನೇಕ ಕಡೆಗಳಲ್ಲಿ ಲ್ಯಾಂಡ್ ಆಕ್ವಿಸಿಷನ್ ಆಫೀಸರ್ ಮಂತ್ತು ಲಾಯರ್‌ಗಳು ಶಾಮೀಲಾಗಿ ಅಲ್ಲಿನ ಭೂಮಿಯ ಬೆಲೆ ೪ ಸಾವಿರವಿದ್ದರೆ ೬ ಸಾವಿರ ರೂಪಾಯಿ ಎಂದು ಅದಕ್ಕೆ ಫಿಕ್ಸ್ ಮಾಡಿ ಅದರಲ್ಲಿ ನನಗಿಷ್ಟು ಕೊಡಿ ಎಂದು ಹೇಳುತ್ತಾರೆ. ಇಂಥಾದ್ದನ್ನ ತಡೆಗಟ್ಟುವುದಕ್ಕೆ ನಾವು ಏನಾದರೂ ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಇದರಿಂದಾಗಿ ನಿಜವಾಗಿ ಯಾವ ಸಂಸ್ಥೆಗಳಿಗೆ ಭೂಮಿ ಸಿಗಬೇಕೋ ಅವರಿಗೆ ಸಿಗುವುದಿಲ್ಲ. ರೈತರು ಭೂಮಿಯನ್ನು ಕೊಳ್ಳಲು ಹೋದರೆ ಬೆಲೆ ಜಾಸ್ತಿಯಾಗುತ್ತದೆ. ಲ್ಯಾಂಡ್ ಆಕ್ವಿಸಿಷನ್ ಆಫೀಸರ್ ಮತ್ತು ಲಾಯರ್‌ಗಳು ಶಾಮೀಲಾಗಿ ಈ ಕೆಲಸ ಮಾಡುತ್ತಾರೆ. ಕೆಲವರು ಒಳ್ಳೆಯ ಅಧಿಕಾರಿಗಳು ಇರುತ್ತಾರೆ ಎಲ್ಲರೂ ಹಾಗೆ ಇರುತ್ತಾರೆಂದು ನಾನು ಹೇಳುತ್ತಿಲ್ಲ. ಆದರೆ ನೂರಕ್ಕೆ ೫೦ ಪರ್ಸೆಂಟ್ ಜನ ಈ ರೀತಿಯಾಗಿ ಇರುತ್ತಾರೆ. ಇದಕ್ಕೆ ರೆಕಮಂಡೇಷನ್ ಕೂಡ ಇರುತ್ತದೆ, ಯಾರಿಗಾದರೂ ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಸಿಗಲಿಲ್ಲವೆಂದರೆ ನನ್ನನ್ನು ಲ್ಯಾಂಡ್ ಆಕ್ವಿಸಿಷನ್ ಯು. ಕೆ. ಪಿ.ಗೆ ಹಾಕಿ ಎಂದು ಹೇಳುತ್ತಾರೆ. ಕೇಳಿ ಕೇಳಿ ಇಲ್ಲಿಗೆ ಹಾಕಿಸಿಕೊಳ್ಳುತ್ತಾರೆ. ತಾವು ಈ ಶೋಷಣೆಯನ್ನು ನಿಲ್ಲಿಸಬೇಕು. ಅಲ್ಲಿ ಕಲ್ಲು ಭೂಮಿ ಇದ್ದರೆ ಅಡಿಕೆ ತೋಟ, ಗಿಡಗಳು, ಗಾರ್ಡನ್ ಇತ್ತು ಎಂದು ಕೊಡುತ್ತಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಪೀಲ್ ಹಾಕಿ ಅಲ್ಲಿ ಹೆಚ್ಚಿಗೆ ಹಾಕಿಸುತ್ತೇವೆಂದು ಹೇಳಿ ಅಲ್ಲಿ ಹೆಚ್ಚಿಗೆ ಹಾಕಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಇದರ ಬಗ್ಗೆ ಹೆಚ್ಚು ಆಸಕ್ತಿ ಇದೆ ಅವರು ಬೇರೆಯವರ ಹಾಗಲ್ಲ. ಇದರ ಬಗ್ಗೆ ಅವರು ಪ್ರಾಕ್ಟೀಸ್ ಮಾಡಿದ್ದಾರೆ. ಲೂಪ್ ಹೋಲ್ಸ್ ಎಲ್ಲಿ ಇದೆ ಎಂದು ನಿಮಗೆ ಗೊತ್ತಾದ ಮೇಲೆ ಅದನ್ನು ರೆಕ್ಟಿಫೈ ಮಾಡಬೇಕು. ಇದನ್ನು ನಿಮ್ಮ ಕಾಲದಲ್ಲಿಯಾದರೂ ಮಾಡಿ ಇದರಿಂದ ಬಡವರಿಗೆ ಸಹಾಯವಾಗುತ್ತದೆ. ಒಂದು ಕಡೆ ಭೂಮಿ ಬೆಲೆ ಜಾಸ್ತಿ ಮಾಡಿ ಅಧಿಕಾರಿಗಳು ಹೊಡೆದುಕೊಳ್ಳುತ್ತಾರೆ. ಇನ್ನೊಂದು ಕಡೆ ಮಾನ್ಯ ತಿಮ್ಮೇಗೌಡರವರು ಹೇಳಿದ ಹಾಗೆ ನೀವು ಅಪೀಲ್ ಹಾಕಿ ನಾವು ಮಾಡಿಕೊಡುತ್ತೇವೆ ಎಂದು ಅವರೇ ಹೇಳಿಕೊಡುತ್ತಾರೆ. ಇಲ್ಲಿ ೪ ಸಾವಿರ ಇದ್ದರೆ ಅಲ್ಲಿ ೮ ಸಾವಿರ ಎಂದು ಮಾಡಿ ಕೊಡುತ್ತಾರೆ. ಲಾಯರ್‌ಗಳು ಕೇಸ್‌ಗೆ ಅಟೆಂಡ್ ಆಗುವುದಿಲ್ಲ ರೆಟಿನ್ ಸ್ಟೇಟ್‌ಮೆಂಟ್ ಕೊಡುತ್ತಾರೆ. ಇದೆಲ್ಲವನ್ನು ತಡೆಗಟ್ಟುವುದಕ್ಕೆ ಸಮಗ್ರವಾದ ಒಂದು ಮಸೂದೆಯನ್ನು ಈ ಸದನದ ಮುಂದೆ ತಂದಿದ್ದರೆ ಒಳ್ಳೆಯದಿತ್ತು. ನಿಮಗೂ ಕೂಡ ಇದರ ಬಗ್ಗೆ ಗೊತ್ತಿದೆ ಅನೇಕ ಶಾಸಕರಿಗೂ ಇದರ ಬಗ್ಗೆ ಗೊತ್ತಿದೆ ಎಲ್ಲರಿಗೂ ಗೊತ್ತಿದ್ದರೂ ಕೂಡ ಇದನ್ನು ಸಹಿಸಿಕೊಂಡು ಬರುತ್ತಿದ್ದೇವೆ. ಈ ಶೋಷಣೆಯಾಗುತ್ತಿದ್ದರೂ ನಾವು ಅದನ್ನು ನೋಡುತ್ತಿದ್ದೇವೆಯೇ ಹೊರತು ಅದನ್ನು ತಪ್ಪಿಸಲಿಕ್ಕೆ ಏನೂ ಉಪಾಯವನ್ನು ಹುಡುಕಲಿಲ್ಲವೆಂದರೆ ಹೇಗೆ? ಇದನ್ನು ಯಾರು ಮಾಡಬೇಕು ಎಂಬುದನ್ನೂ ನಾವು ಯೋಚನೆ ಮಾಡಬೇಕು. ಯಾರು ಕಾನೂನು ಮಂಡುತ್ತಾರೆ ಅವರಿಗೆ ಇದರ ಲೂಪ್ ಹೋಲ್ಸ್ ಎಲ್ಲಿ ಇದೆಯೆಂದು ಗೊತ್ತಿದ್ದರೂ ಅದಕ್ಕೆ ತಕ್ಕ ಹಾಗೆ ಕಾನೂನನ್ನು ಹಿಡ್ಡುಪಡಿ ಮಾಡಿ ಇದನ್ನು ಸರಿಪಡಿಸದೇ ಹೋದರೆ ಮಂತ್ರಿ ಯಾರು ಇದನ್ನು ಸರಿಪಡಿಸುತ್ತಾರೆ. ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಾಗಲೀ, ಸಿವಿಲ್ ಕೋರ್ಟ್‌ನಲ್ಲಾಗಲೀ, ಹೈಕೋರ್ಟ್‌ನಲ್ಲಾಗಲೀ ಅವರು ಕಾನೂನನ್ನು ಇಂಟರ್‌ಪ್ರಿಟೇಷನ್ ಮಾಡುತ್ತಾರೆಯೇ ಹೊರತು ಅವರು ಇದರ ಬಗ್ಗೆ ಏನಾದರೂ ಹೇಳುವುದಕ್ಕೆ ಬರುತ್ತದೆಯೇ? ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಮಾನ್ಯ ಪಾಟೀಲ್‌ರವರು, ಮೊಯಿಲಿಯವರು ಹೇಳಿದ ಹಾಗೆ ಸಣ್ಣಪುಟ್ಟ ಪತ್ರಿಕೆಗಳವರು ತಮ್ಮ ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಹಾಕಿ ಕೋಟ್ಯಾಧೀಶ್ವರರಾಗಿದ್ದಾರೆ. ಜಾಹಿರಾತನ್ನು ಒಂದು ಪೇಜ್ ತುಂಬಾ ಹಾಕುವುದು ಮತ್ತೊಂದು ಪೇಜ್‌ನಲ್ಲಿ ದಪ್ಪ ದಪ್ಪ ಅಕ್ಷರಗಳಲ್ಲಿ ಕೆಲವು ನ್ಯೂಸ್ ಅನ್ನು ಹಾಕುವುದು ಇಡೀ ಪತ್ರಿಕೆ ಎರಡು ಪುಟ ಇರುತ್ತದೆ. ಜಾಹೀರಾತಿಗೋಸ್ಕರವೇ ಕೆಲವು ವೇವರ್‌ಗಳು ನಡೆಯುತ್ತಿವೆ. ನಿಜವಾಗಿ ಪತ್ರಿಕೆಯನ್ನು ನಡಸುವವರು ಇಂದು ಕಷ್ಟದಲ್ಲಿದ್ದಾರೆ ಅವರಿಗೆ ಸರಕಾರ ಗಮನ ಕೊಡಬೇಕು. ಇದಕ್ಕೆ ಒಂದು ನಿಯಮವೇನೂ ಇಲ್ಲ ಅಲ್ಲಿರತಕ್ಕಂತಹ ಸ್ಪೆಷಲ್ ಡಿ, ಪಿ. ಯವರು ಅವರಿಗೆ ಯಾರಿಗೆ ಬೇಕೋ ಅವರಿಗೆ ಜಾಹೀರಾತನ್ನು ಕೊಡುತ್ತಾರೆ ಆ ಪತ್ರಿಕೆಗಳವರು

ಒಂದು ತಿಂಗಳಿಗೆ ಒಬ್ಬೊಬ್ಬರು ಒಂದೊಂದು ಲಕ್ಷ ರೂಪಾಯಿ ಎಂದು ಬಿಲ್ ಮಾಡಿದ್ದಾರೆ. ಅವರು ಎರಡು ಸಾವಿರ ಪತ್ರಿಕೆ ಪ್ರಿಂಟ್ ಮಾಡುವುದಿಲ್ಲ ಅವರಿಗೆ ಲಕ್ಷಾಂತರ ರೂಪಾಯಿಗಳ ಲಾಭ ಸಿಗುತ್ತದೆ. ದೊಡ್ಡ ದೊಡ್ಡ ರಾಜ್ಯಗಳಿಗೆ ಹೋಗತಕ್ಕಂತಹ ಪತ್ರಿಕೆಗಳಿಗೂ ಅಷ್ಟೇ ಸಿಗುತ್ತದೆ. ಹೀಗಾದರೆ ಗತಿ ಹೇಗೆ? ಈ ಜಾಹೀರಾತುಗಳಲ್ಲಿ ದುರುಪಯೋಗವಾಗುತ್ತಿದೆ. ಇದಕ್ಕೆ ಒಂದು ನಿರ್ದಿಷ್ಟವಾದ ರೂಲ್ ಅನ್ನು ಮಾಡಬೇಕು. ಇಷ್ಟು ಸರ್ಕುಲೇಷನ್ ಇದ್ದರೆ ಇಷ್ಟು ಅಡ್ವರ್‌ಟೈಸ್‌ಮೆಂಟ್ ಕೊಡಬೇಕು, ಎಂಥಾದ್ದು ಕೊಡಬೇಕು ಎನ್ನತಕ್ಕಂಥದ್ದನ್ನು ನಿಯಮಾವಳಿಯಲ್ಲಿ ಹಾಕಿಕೊಂಡರೆ ಇದು ಸರಿಯಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ತಾವು ಒಂದು ಸಮಗ್ರವಾದಂಥ ತಿದ್ದುಪಡಿಯನ್ನು ತಂದುಕೊಡುತ್ತೀರಿ ಎಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಜೊತೆಯಲ್ಲಿ ಎಲ್ಲೆಲ್ಲಿ ಇವತ್ತು ಲ್ಯಾಂಡ್ ಅಕ್ವಿಜಿಷನ್ ಹೈಯರ್ ಕಾಂಪೆನ್‌ಷೇಷನ್ ಇನ್ ಈಲ್ಯೂಷನ್ ವಿತ್ ಆಫೀಸರ್ಸ್ ತೆಗೆದುಕೊಂಡಿದ್ದಾರೆ ಅಂತಹವುಗಳನ್ನು ಇನ್‌ವೆಸ್ಟಿಗೇಷನ್ ಮಾಡಬೇಕು. ಕೆಲವು ಕಡೆ ಸ್ಕ್ಯಾಂಡಲ್ಸ್ ಎಂದು ಮಾಡಿ. ನಿಮ್ಮಿಂದ ಇಡೀ ಸ್ಟೇಟ್‌ನಲ್ಲಿಯೇ ಮಾಡುವುದಕ್ಕೆ ಆಗುವುದಿಲ್ಲ. ನಾವು ಬಂದರೂ ಕೂಡಾ ಮಾಡುವುದಕ್ಕಾಗುವುದಿಲ್ಲ. ಅಟ್‌ಲೀಸ್ಟ್ ಶೆ ಕಡೆಯಲ್ಲಿ ಸ್ಕ್ಯಾಂಡಲ್ ಕೇಸಸ್ ಎಂದು ಮಾಡಿದರೆ ಒಂದು ಹೆದರಿಕೆ ಆದರೂ ಹುಟ್ಟುತ್ತದೆ, ಆ ರೀತಿ ಮಾಡುವವರಿಗೆ ಮುಂದೆ ಭಯ ಬರುತ್ತದೆ. ಈ ರೀತಿ ಮಾಡುವವರೂ ಇನ್ನು ಮುಂದೆ ಹೆದರುತ್ತಾರೆ, ಹಿಂದಾದರೂ ಇದನ್ನು ಸರ್ಕಾರ ಕೇಳಿಯೇ ಕೇಳುತ್ತದೆ ಎಂದು ತಪ್ಪು ಹಾದಿಯಲ್ಲಿ ಹೋಗುವುದು ತಪ್ಪುತ್ತದೆ. ತಪ್ಪು ಹಾದಿಯಲ್ಲಿ ಹೋದಾಗ ಸರ್ಕಾರ ಕೇಳತಕ್ಕಂಥದ್ದು ಇದೆ ಎನ್ನತಕ್ಕಂಥದ್ದು ಎಲ್ಲರಿಗೂ ಕೂಡಾ ಗೊತ್ತಾಗುತ್ತದೆ. ಎಲ್ಲಾ ಕಡೆಯಲ್ಲಿ ಇದನ್ನು ಮಾಡಿ ಎಂದು ಹೇಳುವುದಿಲ್ಲ. ಕನಿಷ್ಟಪಕ್ಷ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಏನು ಇವೆ ಅಂಥ ಕಡೆಯಲ್ಲಾದರೂ ಮಾಡಿಸಿ ಇದನ್ನು ಮಾಡುವುದಕ್ಕೆ ಏನು ತಾಪತ್ರಯ ಇದೆ? ಇಡೀ ರಾಜ್ಯದಲ್ಲಿ ಮಾಡುವುದಕ್ಕೆ ಆಗದೇ ಇರಬಹುದು, ಅಷ್ಟು ಮೆಷಿನರಿ ತಯ್ಯಾರಿಲ್ಲ ಇಲ್ಲದೇ ಇರಬಹುದು. ಒಂದು ಪ್ರಾಜೆಕ್ಟ್‌ನಲ್ಲಿ ಯಾರ್ಯಾರು ತಪ್ಪನ್ನು ಮಾಡಿದ್ದಾರೆ. ಅವರುಗಳಿಗೆ ಒಬ್ಬೊಬ್ಬರಿಗೂ ಶಿಕ್ಷೆಯನ್ನು ಮಾಡಿದ್ದರೆ ಹೆದರಿಕೆಯಾದರೂ ಇರುತ್ತಿತ್ತು, ಕಾನೂನು ಪ್ರಕಾರವಾಗಿ ವ್ಯಾಲ್ಯೂಯೇಷನ್ ಏನು ಇದೆ ಸಬ್ ರಿಜಿಸ್ಟ್ರಾರ್‌ರವರ ಆಫೀಸ್‌ನಲ್ಲಿ. ಅಷ್ಟು ಮಾತ್ರ ಕಾಂಪೆನ್‌ಷೇಷನ್ ಕೊಡಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ ತಾವು ಇತ್ತ ಕಡೆ ಗಮನವನ್ನು ಹರಿಸುತ್ತೀರಿ ಎಂದು ಹೇಳಿ ನಾನು ಭಾವಿಸಿದ್ದೇನೆ. ಯು. ಕೆ.ಪಿ. ಹಾರಂಗಿ ಮತ್ತು ಹೇಮಾವತಿಯಲ್ಲಿ ಲ್ಯಾಂಡ್ ಅಕ್ವಿಜಿಷನ್ ಮಾಡಿ, ಹೈಯರ್ ಕಾಂಪೆನ್‌ಷೇಷನ್ ಯಾರು ತೆಗೆದುಕೊಂಡಿದ್ದಾರೆ, ಅಲ್ಲಿ ಇಲ್ಲದೇ ಇರತಕ್ಕಂಥ ಕ್ವಾಪ್ರ್ಸ ಹೆಸರನ್ನು ಬದಲಿಸಿ ಗಾರ್ಡನ್ ಇಲ್ಲದೇ ಇರತಕ್ಕಂಥದ್ದನ್ನು ಗಾರ್ಡನ್ ಲ್ಯಾಂಡ್ ಎಂದು ಹೇಳಿ ಕಾಂಪೆನ್‌ಸೇಷನ್‌ನ್ನು ಯಾರು ತೆಗೆದುಕೊಂಡಿದ್ದಾರೆಂದು ಸಂಪೂರ್ಣವಾಗಿ ಇನ್‌ವೆಸ್ಟಿಗೇಷನ್‌ನ್ನು ಮಾಡಿಸಿ ತಾವು ಅವರಿಗೆ ಶಿಕ್ಷೆಯನ್ನು ಕೊಡುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಲ್ಯಾಂಡ್ ಅಕ್ವಿಜಿಷನ್ ಅಮೆಂಡ್‌ಮೆಂಟ್ ಬಿಲ್ ಏನು ಇದೆ, ಇದರಲ್ಲಿ ಅಮೆಂಡ್‌ಮೆಂಟ್ ಆಗತಕ್ಕಂಥದ್ದು ಅವಶ್ಯಕತೆ ಇದೆ, ಆದರೆ ಕೆಲವು ಇದರಲ್ಲಿ ಮಾರ್ಪಾಡು ಕೂಡ ಆಗ ಬೇಕಾದದ್ದು ಬದಲಾವಣೆಯ ಆಗತ್ಯತೆ ಇದೆ ಎಂದು ನನಗನ್ನಿಸುತ್ತದೆ. ಏಕೆಂದರೆ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಖಾಸಗಿ ಭೂಮಿಯನ್ನು ಅಕ್ವೆಯರ್ ಮಾಡತಕ್ಕಂಥದ್ದು ಸ್ವಾಭಾವಿಕ ಪದತ್ತಿ ಅತೀ ಅಗತ್ಯ. ಈ ರೀತಿಯಲ್ಲಿ ಮಾಡಿದಾಗ ಈಗ ಏನು ಪತ್ರಿಕೆಯಲ್ಲಿ ಪಬ್ಲಿಸಿಟಿಯನ್ನು ಕೊಡಬೇಕು ಎನ್ನತಕ್ಕಂಥ ಒಂದು ನಿಯಮ ಏನು ಇದೆ, ಇದು ಅಕ್ವಿಜಿಷನ್ ಮಾಡತಕ್ಕಂಥ ಉದ್ದೇಶದಿಂದ. ಹತ್ತು ಗುಂಟೆ ಭೂಮಿಯನ್ನು ಒಂದು ಸಾರ್ವಜನಿಕ ಉದ್ದೇಶಕ್ಕೋಸ್ಕರ ಮಾಡಬೇಕು. ಲ್ಯಾಂಡ್ ವ್ಯಾಲ್ಯೂ ಒಂದು ಸಾವಿರ ರೂಪಾಯಿಯಾಗುತ್ತದೆ. ಆದರೆ ಪೇಪರ್ ಅಡ್ವರ್‌ಟೈಸ್‌ಮೆಂಟ್‌ಗೆ ಸುಮಾರು ನಾಲ್ಕೈದು ಸಾವಿರ ರೂಪಾಯಿ ಆಗುತ್ತದೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ನನ್ನ ಪಂಚಾಯಿತಿಯ ವ್ಯಾಪ್ತಿಯಲ್ಲಿ ಒಂದು ಗ್ರಾಮದಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆಯಿತು. ಫರ್ಸ್ಟ್ ನೋಟಿಫಿಕೇಷನ್ ಮತ್ತು ಫೈನಲ್ ನೋಟಿಫಿಕೇಷನ್ ಎರಡನ್ನೂ ಪತ್ರಿಕೆಯಲ್ಲಿ ಕೊಡುವುದಕ್ಕೆ ಆ ಜಮೀನಿನ ವ್ಯಾಲ್ಯೂ ೧೫೦೦ ರೂಪಾಯಿಗಳು ಎಂದು ಫಿಕ್ಸ್ ಆಗ್ತು. ಪತ್ರಿಕೆಯಲ್ಲಿ ಇದನ್ನು ಪಬ್ಲಿಷ್ ಮಾಡುವುದಕ್ಕಾಗಿ ಆರು ಸಾವಿರ ರೂಪಾಯಿ ಚಿಲ್ಲರೆಯಾದ್ದನ್ನು ಕಟ್ಟಬೇಕೆಂದು ಪಂಚಾಯಿತಿಯವರಿಗೆ ಒಂದು ನೋಟೀಸನ್ನು ಕೊಟ್ಟರು. ಪಂಚಾಯಿತಿಯವರು ಅದನ್ನು ಕಟ್ಟುವುದಕ್ಕೆ ಸಾಧ್ಯವಾಗದೇ ಇದ್ದುದರಿಂದ ಆ

ಅಕ್ವಿಜಿಷನನ್ನು ಕೈಬಿಡಬೇಕಾದ ಪರಿಸ್ಥಿತಿ ಬಂತು. ಹಿಂದೆ ಗೆಜೆಟ್‌ನಲ್ಲಿ ಅನೌನ್ಸ್ ಮಾಡಿ ಹಿಂದಿಲ್ಲಾ ಅಕ್ವಿಜಿಷನ್ ನಡೆಯುತ್ತಿತ್ತು. ಇತ್ತೀಚೆಗೆ ಏನಾಯಿತು ಎಂದರೆ ಆದು ಜಮೀನುದಾರನಿಗೆ ತಲುಪುವುದಿಲ್ಲ ಎಂದು ಹೇಳಿ, ಪತ್ರಿಕೆಯಲ್ಲಿ ಜಾಹೀರಾತು ಮಾಡಬೇಕು ಎಂದು ಮಾಡಿರುವುದರಿಂದ ಅದರ ಕಾಸ್ಟ್ ಜಾಸ್ತಿ ಬರುತ್ತದೆ. ಆದಕ್ಕಾಗಿ ಒಂದು ರಿಜಿಸ್ಟರ್ಡ್ ಪೋಸ್ಟ್ ಮೂಲಕವೋ ಮತ್ತೊಂದರ ಮೂಲಕವೋ ಆ ಜಮೀನುದಾರನಿಗೆ ತಿಳಿಸಿ ಅಕ್ವೈರ್ ಮಾಡತಕ್ಕಂಥ ಉದ್ದೇಶ ಒಳ್ಳೆಯದು. ಈ ರೀತಿ ಹೆಚ್ಚು ಹಣವನ್ನು ಪತ್ರಿಕೆಗಳಿಗೆ ತೆರಬೇಕಾಗುತ್ತದೆ. ಅದಕ್ಕೆ ಒಂದು ಪ್ರಾಪಾಡನ್ನು ಇದರಲ್ಲಿ ಮಾಡಿದರೆ ಅನುಕೂಲವಾಗುತ್ತದೆ ಮತ್ತು ಎರಡನೆಯದಾಗಿ ಈಗ ಸರ್ಕಾರದವರು ಒಂದು ಅಕ್ವಿಜಿಷನ್ ಮಾಡುವುದಕ್ಕೆ ಪ್ರಾರಂಭವಾಗಿ ೩೫ ವರ್ಷಗಳು ಆಗುವ ಸಾಧ್ಯತೆ ಕೂಡ ಇದೆ. ಇದರಿಂದ ವಿಲೇಜ್ ಎಕ್ಸ್‌ಟೆನ್ಷನ್ಸ್ ಕೂಡಾ ಇಗದೇ ಇರತಕ್ಕಂಥ ಸಂದರ್ಭಗಳು ಕೂಡಾ ಬೇಕಾದಷ್ಟು ಇದೆ. ಆದ್ದರಿಂದ ಇದನ್ನು ತೀವ್ರವಾಗಿ ಸಾರ್ವಜನಿಕವಾಗಿ ಅಕ್ವೈರ್ ಮಾಡಿಕೊಳ್ಳಬೇಕು, ಇದು ಒಂದು. ಎರಡನೆಯದು ಈ ಕಾಂಪೆನ್‌ಸೇಷನನ್ನು ಕೊಡುವ ಕೆಲಸದ ಬಗ್ಗೆ, ಈಗ ತುಮಕೂರಿನ ಹೇಮಾವತಿ ನಾಲೆಯನ್ನು ಏನು ಮಾಡುತ್ತಿದ್ದಾರೆ, ಅವರಿಗೆ ಪರಿಹಾರವನ್ನು ಕೊಡುವ ಬಗ್ಗೆ ಅವರುಗಳಿಗೆ ಐದು ವರ್ಷ ಆದರೂ ಏನೂ ಪರಿಹಾರವನ್ನು ಕೊಟ್ಟಿಲ್ಲ, ಅಲ್ಲಿ ಕೆಲಸ ಕೂಡಾ ಏನೂ ಆಗಿಲ್ಲ. ಆದ್ದರಿಂದ ಪರಿಹಾರಧನವನ್ನು ಸರಿಯಾದ ಬೆಲೆಯಲ್ಲಿ ಬೇಗನೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಸಹಾ ಅಮೆಂಡ್‌ಮೆಂಟ್‌ನಲ್ಲಿ ತರತಕ್ಕಂಥದ್ದು ಸೂಕ್ತ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಂಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಅನ್ನು ತಾವು ತರುತ್ತಿದ್ದೀರಿ. ಇದರಲ್ಲಿ ಮೂಲ ಉದ್ದೇಶ ಏನು ಇದೆ. ಸ್ಟೇಟ್‌ಮೆಂಟ ಆಫ್ ಆಬ್ಜೆಕ್ಟ್‌ನಲ್ಲಿ ಏನು ಹೇಳಿದ್ದಾರೆ ಅಂದರೆ. If is considered necessary to amend the Act suitably so that it is enough if the gist of the notification is published in news paper." ಆ ಉದ್ದೇಶ ಏನು ಇದೆ, ಇದನ್ನು ಅಮೆಂಡ್‌ಮೆಂಟ್‌ನಲ್ಲಿ ತರಲು ಎಂಥ ಸ್ಪಷ್ಟವಾದ ಶಬ್ದಗಳನ್ನು ಕೈಬಿಟ್ಟಿದ್ದಾರೆ, ಇದರ ಬಗ್ಗೆ ಸರಿಯಾದ ರೀತಿಯಲ್ಲಿ ನೋಡಿಲ್ಲವೋ ಏನೋ ಎಂದು ನನಗೆ ಅರ್ಥವಾಗುವುದಿಲ್ಲ, ಏಕೆಂದರೆ ನಮ್ಮ ಉದ್ದೇಶ ಸ್ಪಷ್ಟವಾಗಿ ಅಮೆಂಡ್‌ಮೆಂಟ್‌ನಲ್ಲಿ ಬರದೇ ಇದ್ದರೆ ಈ ತಿದ್ದುಪಡಿಯನ್ನು ತಂದರೂ ಸಾಧ್ಯವಾಗುವುದಿಲ್ಲ. ಎರಡನೆಯದು ಬಹಳ ಪ್ರಾಮುಖ್ಯವಾದುದು ತಾವು ಪ್ರಾತಿನಾಡುತ್ತಾ ಸಾಕಷ್ಟು ಅವ್ಯವಹಾರ ನಡೆದಿದೆ, ಕೆಲವು ಗವರ್ನಮೆಂಟ್ ಅಡ್ವೊಕೇಟ್ಸ್, ಲ್ಯಾಂಡ್ ಅಕ್ವಿಸಿಷನ್ ಆಫೀಸರ ಎಲ್ಲಾ ಸೇರಿಕೊಂಡು ಲೂಟಿ ಮಾಡುತ್ತಿದ್ದಾರೆ ಎಂದು ಹೇಳಿದಿರಿ. ಅಲ್ಲಿರುವ ಕೆಲವು ಅಧಿಕಾರಿಗಳು ಟ್ರಾನ್ಸ್‌ಫರ್ ಮಾಡುವುದೂ ಬೇಡ, ಪ್ರೊಮೋಷನ್ ಸಹ ಬೇಡ ಅಲ್ಲೇ ಇರುತ್ತೇವೆಂದು ಹೇಳಿದ್ದಾರೆಂದು ಗೊತ್ತಿರುವ ಸಂಗತಿಯಾಗಿದೆ, ಇಷ್ಟು ಅವ್ಯವಹಾರ ನಡೆಯುತ್ತಿರುವ ಬಗ್ಗೆ ಗೊತ್ತಿರುವ ಸಂದರ್ಭದಲ್ಲಿ ಇದನ್ನು ಸರಿಪಡಿಸುವ ದೃಷ್ಟಿಯಿಂದ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುತ್ತಿದ್ದೇನೆ. ಹಿಂದೆ ಕುಮಾರ ಸ್ವಾಮಿ ಎಂಬುವರು ನ್ಯಾಯಾಧೀಶರಿದ್ದ ಸಂದರ್ಭದಲ್ಲಿ ಜಮೀನು ಪರಿಹಾರ ೨೦ ಸಾವಿರ ಮ್ಯಾಕ್ಸಿಮಮ್ ಪರಿಹಾರ ಕೊಡಬೇಕು, ಕಡಿಮೆ ಕೊಟ್ಟಿದ್ದಾರೆ ಎಂದು ಹೈಕೋರ್ಟಿಗೆ ಬಂದ ಸಂದರ್ಭದಲ್ಲಿ ಒಬ್ಬ ಜಡ್ಜ್ ೨೦ ಸಾವಿರ ಕೊಡಿದ್ದ ಸಂದರ್ಭದಲ್ಲಿ ಆತನಿಗೆ ಒಂದು ಲಕ್ಷ ರೂಪಾಯಿ ಕೊಟ್ಟು ಆ ಸಮಯದಲ್ಲಿ ಕೆಲವರ ಪ್ರೊಮೋಷನ್ ತಡೆಹಿಡಿದಿದ್ದ ದೊಡ್ಡ ಪ್ರಕರಣ ಆಗಿದ್ದು ಸರ್ಕಾರಕ್ಕೆ ಗೊತ್ತಿದೆ. ಆಗ ಚೀಫ್ ಜಸ್ಟೀಸ್ ಗೋವಿಂದ ಭಟ್ ಇದ್ದರು. ಇಲ್ಲಿ ನಾನು ಕೇಳುತ್ತಿರುವ ಮೂಲ ಉದ್ದೇಶ ಎಂದರೆ ಪಾರ್ಟಿ ಕೇಳಿದುದಕ್ಕಿಂತ ಹೆಚ್ಚು ಪರಿಹಾರ ಜಾಸ್ತಿ ಕೊಟ್ಟಿರುವ ನಿದರ್ಶನಗಳು ಇವೆ. ಲ್ಯಾಂಡ್ ಅಕ್ವಿಸಿಷನ್ ಆಫೀಸರ್, ಗವರ್ನಮೆಂಟ್ ಅಡ್ವೋಕೇಟ್ಸ್ ಪಾರ್ಟಿಗಳು ಎಲ್ಲಾ ಸೇರಿಕೊಂಡು ಸರ್ಕಾರ ಬೊಕ್ಕಸಕ್ಕೆ ಮೋಸ ಮಾಡುವ ಅನೇಕ ಪ್ರಕರಣಗಳು ಬಂದಿದೆ. ಆದರೆ ಸರ್ಕಾರಕ್ಕೆ ಸಂಬಂಧಪಟ್ಟ ಯಾವುದೇ ಉನ್ನತ ಅಧಿಕಾರಿ, ಪಾರ್ಟಿ ಕೇಳಿದ್ದು ಎಷ್ಟು, ಸಂಬಂಧಪಟ್ಟ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಸ್ಕ್ರಾಂಕ್ಷನ್ ಮಾಡಿದ್ದು ಎಷ್ಟು. ಸರ್ಕಾರದ ಬೊಕ್ಕಸಕ್ಕೆ ಧಕ್ಕೆ ಬರದ ರೀತಿಯಲ್ಲಿ ಕರ್ತವ್ಯ ಮಾಡಬೇಕು ಎಂದು ಎಷ್ಟರಮಟ್ಟಿಗೆ ಮಾಡುತ್ತಿದ್ದಾನೆ. ಇದಕ್ಕೆ ಯಾವುದೇ ರೀತಿಯಾದ ಗಮನ ಕೊಟ್ಟಿರುವಂಥದ್ದು ಅಥವಾ ಈ ರೀತಿ ಭ್ರಷ್ಟಾಚಾರ ಪ್ರಕರಣಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದು ಇದೆಯೇ. ಅಥವಾ ಸಂಬಂಧಪಟ್ಟವರಿಗೆ ಎಚ್ಚರಿಕೆಯನ್ನು ಕೊಡುವಂತಹ ಯಾವುದೇ ಪ್ರಯತ್ನ ಸರ್ಕಾರದ ಕಡೆಯಿಂದ ಆಗಲಿಲ್ಲ. ನಿಜವಾಗಿ ಮಂತ್ರಿಗಳಿಗೆ ಇದನ್ನು ಸ್ಪಷ್ಟ ಮಾಡಲು ಸಮಯಾವಕಾಶ ಇರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಎಚ್ಚರಿಕೆ

ಮಹಿಸಿ ಈ ರೀತಿ ಅವ್ಯವಹಾರ ನಡೆಯದಂತೆ ನೋಡಿಕೊಳ್ಳುವುದರ ಬಗ್ಗೆ ಎಷ್ಟು ಪ್ರಕರಣಗಳನ್ನು ತಡೆಹಿಡಿಯಂಪಂತಹ ಪ್ರಯತ್ನಗಳನ್ನ ಮಾಡಿದ್ದೀರಿ. ಎಷ್ಟು ಸಂದರ್ಭದಲ್ಲಿ ಭ್ರಷ್ಟಾಚಾರಗಳು ಆಗದ ರೀತಿಯಲ್ಲಿ ನೋಡಿಕೊಂಡಿದ್ದೀರಿ. ಪತ್ರಿಕೆಗಳಲ್ಲಿ ಅಡ್ವಟೈಸ್‌ಮೆಂಟ್ ಕೊಡತಕ್ಕ ಸಂದರ್ಭದಲ್ಲಿ ಅಡ್ವಟೈಸ್‌ಮೆಂಟ್ ಛಾರ್ಜಸ್ ಜಾಸ್ತಿ ಆಗುತ್ತದೆಂದು ಇದರ ಸಾರಾಂಶ ಒಂದಂಶ ಪಾತ್ರ ಕೊಟ್ಟರೆ ಸಾಕು. ಈ ಬಗ್ಗೆ ಅಮೆಂಡ್‌ಮೆಂಟ್ ಅನ್ನು ತರುವುದಕ್ಕೆ ಪ್ರಯತ್ನ ಮಾಡಿದರೆ ಇದರ ಬಗ್ಗೆ ಸರ್ಕಾರಕ್ಕೆ ಧನ್ಯವಾದಗಳು. ಈ ಒಂದು ರೀತಿಯಿಂದ ಅಡ್ವಟೈಸ್‌ಮೆಂಟ್‌ಗೆ ಕೊಡುವಂತಹ ಸಾವಿರಾರು ರೂಪಾಯಿಗಳನ್ನು ಉಳಿಸಬಹುದು. ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ಲಕ್ಷಾಂತರ ರೂಪಾಯಿ ಲೂಟಿಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಲ್ಯಾಂಡ್ ಅನ್ನು ಅಕ್ವೈರ್ ಮಾಡಿಕೊಂಡಂತಹ ಬಡ ರೈತರಿಗೆ ಅನುಕೂಲವಾಗುತ್ತದೆ. ಲ್ಯಾಂಡ್ ಅಕ್ವೈರ್ ಮಾಡಿ ಕೊಟ್ಟರೆ ನನಗೆ ಇಷ್ಟು ಕೊಡಬೇಕೆಂದು ನಿಬಂಧನೆ ಹಾಕಿ ಮಾತುಕತೆ ಮುಗಿಸಿ ನಂತರ ಲ್ಯಾಂಡ್ ಅನ್ನು ಅಕ್ವೈರ್ ಮಾಡಿಸಿ ಕೊಡುವಂತಹ ಸಾವಿರಾರು ಪ್ರಕರಣಗಳು ಇವೆ. ಅದಕ್ಕೋಸ್ಕರ ನಾನು ಕೇಳಂ ತ್ತಿರುವುದು ತಮ್ಮ ಸರ್ಕಾರ ಬಂದ ಮೇಲೆ ಈ ರೀತಿ ಸಾವಿರಾರು ಪ್ರಕರಣಗಳು ಇದ್ದ ಸಂದರ್ಭದಲ್ಲಿ ಅದು ಆಗದಂತೆ ತಡೆಹಿಡಿಯುವಂತಹ ಪ್ರಯತ್ನವನ್ನು ಮಾಡಬೇಕು. ಅಥವಾ ಇದನ್ನು ನಿಲ್ಲಿಸು ವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಇದರ ಬಗ್ಗೆ ವಿಶೇಷವಾದ ಪ್ರಯತ್ನ ಮಾಡಬೇಕು ಮತ್ತು ನಿಜವಾಗಿ ಆಗತ್ಯ ಇರುವ ನಗರ ಸಭೆ ಅಥವಾ ಪುರಸಭೆ ಪ್ರದೇಶಗಳಲ್ಲಿ ಅಥವಾ ಪಂಚಾಯಿತಿ ಲೆವೆಲ್‌ಗಳಲ್ಲಿ ಬಡವರು ಗುಡಿಸಲುಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಾರೆ. ಈ ರೀತಿ ಅವರು ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವ ಸಂದರ್ಭದಲ್ಲಿ ಪುರಸಭೆಗಳಿಗೆ ಪೂರ್ಣ ಅಧಿಕಾರ ಇಲ್ಲ. ಅನೇಕ ಅಡ್ಡಿ ಆತಂಕಗಳು ಇವೆ. ಪುರಸಭೆಗಳಿಗೆ ಅಥವಾ ನಗರ ಸಭೆಗಳಿಗೆ ಪೂರ್ಣ ಅಧಿಕಾರ ಇಲ್ಲ. ಮಂಡಲ್ ಪಂಚಾಯತಿಯ ಹೊಸ ವ್ಯವಸ್ಥೆ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳಲ್ಲಿ ಸುತ್ತ ಮುತ್ತ ಇರುವ ಬಡಬಗ್ಗರು ಮನೆ ಮಠಗಳನ್ನು ಕಟ್ಟಿಕೊಳ್ಳಲು ಅವರಿಗೆ ಅಧಿಕಾರವನ್ನು ಮಂಡಲ್ ಪಂಚಾಯತ್ ಲೆವೆಲ್‌ನಲ್ಲಿ ಕೊಡಬೇಕು. ಬಡವರು ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವಂತಹ ವಿಶೇಷ ಸಂದರ್ಭಗಳಲ್ಲಿ ಪೂರ್ಣ ಅಧಿಕಾರವನ್ನು ಮಂಡಲ್ ಪಂಚಾಯತ್ ಅಧ್ಯಕ್ಷರಿಗೆ ಅಥವಾ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಕೊಡುವಂತಹ ಪ್ರಯತ್ನವನ್ನು ಏನಾದರೂ ಮಾಡಿದರೆ ಇದರಿಂದ ಬಡವರಿಗೆ ಅನುಕೂಲ ವಾಗುತ್ತದೆ. ಮುಂದೆ ಬರುವ ದಿವಸಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಯನ್ನು ಕಟ್ಟಿಕೊಳ್ಳು ವುದಕ್ಕೆ ಬಡವರಿಗೆ ಅಗತ್ಯ ಇದೆ ಅಥವಾ ಯಾರು ಜಮೀನುಗಳನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಾರೆ, ಆ ಅಧಿಕಾರವನ್ನು ಮಂಡಲ್ ಪಂಚಾಯತ್ ಅಧ್ಯಕ್ಷರಿಗೆ ಕೊಡುವ ಸಲುವಾಗಿ ಅಮೆಂಡ್‌ಮೆಂಟ್‌ನಲ್ಲಿ ಏನಾದರೂ ಪ್ರಾವಿಷನ್ ತಂದರೆ ಅಥವಾ ಇಲ್ಲಿರುವ ಲೋಪದೋಷಗಳನ್ನು ತಡೆಗಟ್ಟುವುದಕ್ಕೆ ಏನಾದರೂ ಪ್ರಯತ್ನ ಮಾಡಿದರೆ ಒಳ್ಳೆಯದು. ಈ ಅಮೆಂಡ್‌ಮೆಂಟ್‌ನಲ್ಲಿ ನಿಮ್ಮ ಉದ್ದೇಶವನ್ನು ಇನ್‌ಕ್ಲೂಡ್ ಮಾಡಿಲ್ಲ. ಆದುದರಿಂದ ತಮ್ಮ ಮುಂಖಾತರ ಮಂತ್ರಿಗಳಲ್ಲಿ ಇದನ್ನು ಇನ್‌ಕ್ಲೂಡ್ ಮಾಡಲು ವಿನಂತಿ ಮಾಡಿಕೊಳ್ಳುತ್ತೇನೆ. ಅದು ಸ್ವಾಗತಾರ್ಹವಾದಂದು, ಇದು ಆಗತ್ಯ ವಾಗಿರುವಂತಹದ್ದು ಇದನ್ನು ಸ್ವಾಗತ ಮಾಡುತ್ತಾ ಕೆಲವು ಅಂಶಗಳಿಗೆ ತಾವು ಸ್ಪಷ್ಟೀಕರಣ ಕೊಡ ಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ತಿದ್ದುಪಡಿ ವಿಧೇಯಕದ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಗೂ ತಮ್ಮ ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಅವರು ವ್ಯಕ್ತ ಮಾಡಿರತಕ್ಕಂಥ ವಿಚಾರಗಳೆಂದರೆ, ಪತ್ರಿಕೆಗಳಿಗೆ ಜಾಹೀರಾತು ಕೊಡುವಾಗ ಪ್ರಾಟ್ರನೈಜ್ ಮಾಡುತ್ತಾರೆಂದು ಹೇಳಿದ್ದಾರೆ. ಕಾನೂನು ಪ್ರಕಾರ ಸ್ಥಳೀಯ ಎರಡು ಪತ್ರಿಕೆಗಳಲ್ಲಿ ಈ ಬಗ್ಗೆ ಜಾಹೀರಾತನ್ನು ಕೊಡಬೇಕಾಗುತ್ತದೆ. ಒಂದು ಜಾಹೀರಾತನ್ನು ಆ ಸ್ಥಳದ ಭಾಷೆಯಲ್ಲಿ ಪ್ರಕಟವಾಗುವ ಪತ್ರಿಕೆಯಲ್ಲಿ ಕೊಡಬೇಕೆಂದು ನಿಯಮವಿದೆ. ಇದರ ಜೊತೆಗೆ ಆ ಪತ್ರಿಕೆಯ ಪ್ರಸಾರ ಎಷ್ಟಿರಬೇಕು ಎಂಬ ಬಗ್ಗೆ ಸಹ ಒಂದು ನಿಯಮ ಇದೆ. ಆದ್ದ ರಿಂದ ಇದನ್ನೆಲ್ಲಾ ನೋಡಿಕೊಂಡು ನಾವು ಜಾಹೀರಾತು ಕೊಡುತ್ತೇವೆ ಇದರಲ್ಲಿ ನಾವು ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದೇವೆ ಎಂದು ಅರ್ಥ ಬರುವ ರೀತಿಯಲ್ಲಿ ಅವರು ತಮ್ಮ ಅಭಿಪ್ರಾಯ

ವನ್ನು ವ್ಯಕ್ತಪಡಿಸಿದ್ದಾರೆ. ಅಧಿಕಾರವನ್ನು ಚಲಾವಣೆ ಮಾಡುವಾಗ ಎರಡು ಸಮಾನಾಂತರ ಅವಕಾಶಗಳು ಇರುವಾಗ ಯಾವುದಕ್ಕೆ ಅವಕಾಶ ಮಾಡಿಕೊಟ್ಟರೆ ಅಧಿಕಾರ ದುರುಪಯೋಗವಾಗುತ್ತದೆ ಮತ್ತು ಯಾವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ಅಧಿಕಾರ ದುರುಪಯೋಗವಾಗುವುದಿಲ್ಲ ಎಂಬುದನ್ನು ಕಂಡುಹಿಡಿಯುವುದಕ್ಕಾಗುವುದಿಲ್ಲ. ತಾವು ದಯಮಾಡಿ ಯೋಜನೆ ಮಾಡಬೇಕು ಏನೆಂದರೆ, ಅಧಿಕಾರ ಮಾಡುವುದು ಸುಲಭ, ಆದರೆ ಅದನ್ನು ಜಾರಿ ಮಾಡುವಾಗ ಅದು ಚರ್ಚಾಸ್ಪದ ಆಗದ ರೀತಿಯಲ್ಲಿ ತೀರ್ಮಾನ ಮಾಡುವುದು ಕಷ್ಟ. ಆದ್ದರಿಂದ ಈ ಬಗ್ಗೆ ಸಲಹೆಗಳನ್ನು ಕೊಡಿ. ತಮ್ಮ ಸಲಹೆಗಳನ್ನು ಆಡಳಿತಾತ್ಮಕವಾಗಿ ಅಳವಡಿಸುವುದಕ್ಕೆ ಸಾಧ್ಯವಾಗುತ್ತದೋ ಏನೋ ನೋಡೋಣ ಎಂದು ಹೇಳುತ್ತೇನೆ. ಮತ್ತೆ ಪರಿಹಾರ ಕೊಡಿಸುವ ಸಮಯದಲ್ಲಿ ಸರ್ಕಾರಿ ವಕೀಲರ ಪಾತ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸ್ವಲ್ಪ ಹೆಚ್ಚು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಆಪಾದನೆ ಎಲ್ಲಾ ವೃತ್ತಿಯವರಿಗೂ ಅನ್ವಯವಾಗುತ್ತದೆ. ಇದು ಕೇವಲ ವಕೀಲರಿಗೆ ಮಾತ್ರ ಅನ್ವಯವಾಗುವುದಿಲ್ಲ. ಕ್ರಮಿನಲ್ ಕೇಸುಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ತಪ್ಪಾಗುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಪರಿಹಾರ ಕೊಡಿಸುವಲ್ಲಿ ವಕೀಲರು ಶಾಮೀಲಾಗುತ್ತಾರೆಂದು ಮಾನ್ಯ ಖಾರ್ಗೆ ಅವರು ಹೇಳಿದರೇ ಹೊರತು, ಅದಕ್ಕೆ ಅವರು ಪರಿಹಾರವನ್ನು ಸೂಚಿಸಲಿಲ್ಲ. ಇದರಲ್ಲಿ ವಕೀಲರೂ ಶಾಮೀಲಾಗುತ್ತಾರೆಂದು ಅವರು ಏನು ಹೇಳಿದರು, ಅವರ ಜೊತೆಗೆ ಮಂತ್ರಿಯವರು ಸಹ ಶಾಮೀಲಾಗಿರುತ್ತಾರೆ. ಪರಿಹಾರ ಪಡೆದುಕೊಳ್ಳುವವರೂ ಸಹ ಶಾಮೀಲಾಗಿರುತಾರೆ. ಇದನ್ನು ತಾವು ತಮ್ಮ ಮನಸ್ಸಿನಲ್ಲಿಟ್ಟು ಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವಾಲ್ಲಿಕಾರ್ಜುನಖರ್ಗೆ.—ನಾವೂ ಅನೇಕ ಹೇಳುತ್ತೇವೆ, ನೀವೂ ಅದೇ ಹೇಳುತ್ತೀರಿ? ಇದಕ್ಕೆ ಪರಿಹಾರ ಏನು? ಇದನ್ನು ಯಾವ ರೀತಿ ತಡೆಗಟ್ಟುತ್ತೀರಿ? ಇದಕ್ಕೆ ಔಷಧ ಕೊಡಿ ಎಂದರೆ, ತಮಗೇ ತಲೆ ನೋಯುತ್ತಿದೆ ಎಂದು ಹೇಳುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್ —ಮನುಷ್ಯನಾದವನು ಪ್ರಾಮಾಣಿಕ ದಾರಿಯಲ್ಲಿ ನಡೆಯದೇ ಹೋದರೆ ನಾವು ಏನೇ ಕಾನೂನನ್ನು ಮಾಡಿದರೂ ಸಹ ಇಂಥಾದ್ದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಇದೇ ನನ್ನ ಉತ್ತರ. ಪೊದಲು ನಾವೆಲ್ಲರೂ ಸರಿಹೋಗೋಣ, ಆಗ ಬೇರೆಯವರು ಸಹ ಸರಿಹೋಗುತ್ತಾರೆ. ಇದೇ ನನ್ನ ಉತ್ತರ. ಇದು ಸರ್ವಕಾಲಿಕವಾದಂಥ ಉತ್ತರ ವೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ಯಾರದು ತಪ್ಪು ಎಂದು ತಾವು ಕಂಡುಹಿಡಿಯುತ್ತೀರಿ? ಭೂಸ್ವಾಧೀನ ಮಾಡಿಕೊಳ್ಳುವವರದ್ದು ತಪ್ಪು ಎಂದು ಹೇಳುತ್ತೀರಾ ? ಅಥವಾ ಭೂಮಿಯನ್ನು ಕಳೆದುಕೊಳ್ಳುವವರದ್ದು ತಪ್ಪು ಎಂದು ಹೇಳುತ್ತೀರಾ ? ಜಾಸ್ತಿ ಪರಿಹಾರ ಕೊಡಿಸುತ್ತೇನೆಂದು ಹೇಳಿ ಬಂದಂಥ ಹಣದಲ್ಲಿ ಅರ್ಧದಷ್ಟು ಹಣವನ್ನು ತಿಂದುಹಾಕುವ ಮಧ್ಯವರ್ತಿಗಳದ್ದು ತಪ್ಪು ಎಂದು ಹೇಳುತ್ತೀರಾ? ಜಡ್ಜ್‌ಗಳಿಗೆ ಹಣ ಕೊಡುತ್ತೇವೆಂದು ಹೇಳಿ ಹಣ ಪಡೆದುಕೊಂಡು ಯಾರಿಗೂ ಹಣ ಕೊಡದಿರುವ ಜನರಲ್ಲಿ ತಪ್ಪು ಕಂಡುಹಿಡಿಯುತ್ತೀರಾ? ಒಂದು ವೇಳೆ ಇಂತಹ ತಪ್ಪು ಮಾಡಿದವರನ್ನು ಹಿಡಿದು ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಹೊರಟಾಗ ಸಾಕ್ಷಿ ಹೇಳಲು ಯಾರೂ ಸಹ ಮುಂದೆ ಬರುವುದಿಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೂ ಕಷ್ಟ ಸಾಧ್ಯವಾದಂಥ ವಿಚಾರ. ಈ ಬಗ್ಗೆ ನಿಗಾ ಇಟ್ಟು ಅದಷ್ಟೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು ರಿವ್ಯೂ ಮಾಡುವ ಸಮಯದಲ್ಲಿ ಭೂಸ್ವಾಧೀನಕ್ಕೆ ಸಂಬಂಧಪಟ್ಟ ಕೇಸ್‌ಗಳು ಕೋರ್ಟ್‌ನಲ್ಲಿ ಎತಕ್ಕೆ ನಿಖಾಲೆ ಆಗಿಲ್ಲ, ಈ ಕೇಸ್‌ಗಳು ಏತಕ್ಕೆ ಜಾಸ್ತಿ ಆಗಿವೆ ಎಂದು ನಾನು ಕೇಳಿದ ಸಮಯದಲ್ಲಿ, ಬೆಳಗಾಂಗೆ ಸಂಬಂಧಪಟ್ಟಂತೆ ಕೆಲವು ಅನುಮಾನಾಸ್ಪದವಾದಂಥ ವಿಚಾರಗಳು ನನ್ನ ಗಮನಕ್ಕೆ ಬಂದವು. ಭೂಸ್ವಾಧೀನಪಡಿಸಿಕೊಳ್ಳುವ ಅಧಿಕಾರಿಗಳು ರೆವಿನ್ಯೂ ಅಧಿಕಾರಿಗಳು ಎಂಬುದು ಸರಿ. ಆದರೆ ಇವರು ಕೊಟ್ಟ ಪರಿಹಾರ ಸಾಲದು, ಹೆಚ್ಚು ಪರಿಹಾರಬೇಕೂ ಎನ್ನುವವರು ೧೮(೧)ರ ಪ್ರಕಾರ ಅರ್ಜಿ ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಅಪ್ಲಿಕೇಷನ್‌ಗಳು ಸಿವಿಲ್ ಜಡ್ಜ್ ಅವರ ಮುಂದೆ ಹೋಗುತ್ತವೆ. ಇವರು ನಮ್ಮ ಆಡಳಿತಾತ್ಮಕ ಅಧೀನದಲ್ಲಿ ಇಲ್ಲ. ಆದ್ದರಿಂದ ಈ ಅರ್ಜಿಗಳು ತೀರ್ಮಾನವಾಗುವುದು ತಡವಾಗಲು ಕಾರಣವೇನೆಂಬುದನ್ನು ತನಿಖೆ ಮಾಡುವಂತೆ ನಾವು ಹೈಕೋರ್ಟಿಗೆ ಪತ್ರ ಬರೆದೆವು. ಇದರ ಮೇಲೆ ಅವರು ವಿಚಾರ ಮಾಡಿದಾಗ ೧೮(೧) ಆಪ್ಲಿಕೇಷನ್‌ಗಳು ಫರ್‌ವಾರ್ಡ್ ಆಗಿಲ್ಲ ಎಂದು ತಿಳಿದುಬಂತು.

ಕಾಂಪನ್ಸೇಷನ್ ಹೆಚ್ಚು ಕೊಟ್ಟಿದ್ದೂ ಆಗಿದೆ, ತೆಗೆದುಕೊಂಡಿದ್ದೂ ಆಗಿದೆ. ಇದರಲ್ಲಿ ಯಾರಂ ಯಾರೋ ಸೇರಿದ್ದಾರೆ. ಇನ್ನೂ ತನಿಖೆಯಾಗುತ್ತಾ ಇದೆ. ಇಂಥಾದ್ದು ಬೇಕಾದಷ್ಟು ಇದೆ, ಇಲ್ಲ, ಎಂದು ಹೇಳುವುದಿಲ್ಲ. ಇದನ್ನು ತಡೆಯುವುದು ಹೇಗೆ ? ಇದು ಒಟ್ಟು ಸಮಾಜದ ಪ್ರಶ್ನೆ, ನನ್ನ ಒಬ್ಬನದೆ ಅಲ್ಲ ನಾನು ಒಬ್ಬನೇ ಮನೆಯಲ್ಲಿ ಕುಳಿತುಕೊಂಡು ಎಲ್ಲರೂ ಸರಿಯಾಗಿರಬೇಕು ಎಂದು ನನ್ನ ಮೂಗಿಗೆ ನೇರವಾಗಿ ನಾನು ಅಂದುಕೊಂಡರೆ ಸರಿಹೋಗುವುದಿಲ್ಲ. ಈ ಪ್ರಶ್ನೆ ನಮ್ಮ ಮುಂದೆ ಇರುವುದು. ನಾನು ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ತಾವು ಸಮಗ್ರ ತಿದ್ದುಪಡಿ ಎಂದು ಹೇಳಿದ್ದುದು.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.–ನಿಮ್ಮ ಕೈಯಲ್ಲೂ ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ ಎಂದು ಒಪ್ಪಿಕೊಂಡಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಮಾಡಿ ಸಾರ್. ನಿಮ್ಮ ಪಕ್ಷದ ಸರ್ಕಾರಗಳು ಬೇಕಾದಷ್ಟು ರಾಜ್ಯಗಳಲ್ಲಿವೆ. ನೀವು ಹೇಳಿದ ಈ ಜವಾಬ್ದಾರಿಯುತವಾದಂಥ ಮಾತುಗಳನ್ನು ಅವರಿಗೂ ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಅವರಲ್ಲಿ ವಿನಂತಿಮಾಡಿಕೊಳ್ಳುವಂಥಾದ್ದು ಏನೆಂದರೆ, ಸರ್ಕಾರದ ಒಬ್ಬ ಜವಾಬ್ದಾರಿಯುತ ಮಂತ್ರಿಯಾಗಿ, ಈ ರೀತಿ ಭ್ರಷ್ಟಾಚಾರ ನಡೆಯುತ್ತಿದೆ ಅಂದಾಗ ಈಗಿನ ಸರ್ಕಾರದ ಜವಾಬ್ದಾರಿ ಇದೆ, ಇದನ್ನ ನಿಲ್ಲಿಸುವುದಕ್ಕೆ ಏನೆಲ್ಲಾ ಸಲಹೆಗಳು ಬೇಕೋ ಆ ಸಲಹೆಗಳನ್ನು ಕೊಡಿ, ಹಿಂದೇ ದೊವುದೇ ರಾಜ್ಯ, ಹಿಂದೆ ಯಾವುದೇ ಸರ್ಕಾರ ಮಾಡಿರಲಿ ಆಥವಾ ಮಾಡಿಲ್ಲದೇ ಇರಲಿ, ಬೇರೆ ಯಾವುದೇ ರಾಜ್ಯ ಮಾಡದೇ ಇರಲಿ, ನಾವು ಮಾಡುತ್ತೇವೆ, ಇದರ ಬಗ್ಗೆ ಏನಂ ಬೇಕೋ ಸ್ಟೆಪ್ಸ್ ತೆಗೆದುಕೊಳ್ಳುತ್ತೇವೆ, ಇದರ ಬಗ್ಗೆ ನಾವು ಯೋಚನೆ ಮಾಡುತ್ತಾ ಇದ್ದೇವೆ, ನೀವು ಸಲಹೆ ಕೊಡಿ ಎಂದು ಹೇಳಬೇಕೇ ಹೊರತು, ಇದಕ್ಕೆ ಸರ್ಟಿಫಿಕೇಟ್ ಕೊಡುವ ರೀತಿಯಲ್ಲಿ ಜವಾಬ್ದಾರಿಯುತರಾದ ಮಂತ್ರಿಗಳು ಮಾತನಾಡುವುದಕ್ಕೆ ಪ್ರಯತ್ನ ಮಾಡಿದರೆ ಬಹುಶಃ ಇದಕ್ಕೆ ಪರಿಹಾರ ಇಲ್ಲ ಎಂದು ಹೇಳಬೇಕಾಗುತ್ತದೆ. ಜನ ಬದಲಾವಣೆಮಾಡಿ ನಿಮ್ಮನ್ನು ಕುರ್ಚಿಯಲ್ಲಿ ಕೂರಿಸಿರುವುದಕ್ಕೆ ಅರ್ಥವಿಲ್ಲ ಎಂದು ಹೇಳಬೇಕಾಗುತ್ತದೆ. ಈ ಮಾತನ್ನು ತಮ್ಮ ಬಾಯಿಂದ ನಾವು ನಿರೀಕ್ಷಣೆ ಮಾಡಿರಲಿಲ್ಲ, ಈ ಮಾತನ್ನು ತಾವು ಹೇಳಬೇಡಿ, ಹೇಳಿದರೆ ಭ್ರಷ್ಟಾಚಾರಕ್ಕೆ ತಾವು ಸರ್ಟಿಫಿಕೇಟ್ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್,–ನನ್ನ ಮಾತನ್ನು ಅವರು ಸರಿಯಾಗಿ ಗ್ರಹಿಸಿದ ಹಾಗೆ ಅನ್ನಿಸುವುದಿಲ್ಲ. ನಾನು ಯಾರಿಗೂ ಸರ್ಟಿಫಿಕೇಟ್ ಕೊಟ್ಟಿಲ್ಲ. ಬೇಜವಾಬ್ದಾರಿಯಿಂದ ಮಾತನಾಡುತ್ತಾ ಇಲ್ಲ, ಬಹಳ ನೊಂದೇ ಈ ಮಾತನ್ನು ಹೇಳುತ್ತಾ ಇದ್ದೇನೆ. ತತ್ವ ಇಲ್ಲಿ ಹೇಳಿದ್ದುದು ಸರಿ. ಆದರೆ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಂಥಂಥ ಸಮಯದಲ್ಲಿ ಸಾಕ್ಷಿ ಪುರಾವೆಗಳನ್ನು ಕೊಡುವುದಕ್ಕೆ ಸಮಾಜದ ಜನ ಮುಂದೆ ಬರುವುದಿಲ್ಲ. ಆ ಜನರನ್ನು ಎಲ್ಲಿಂದ ತರುತ್ತೀರಿ :

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸರಿ ಸ್ವಾಮಿ, ಆ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗಬೇಕಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ದಯವಿಟ್ಟು ಸ್ವಲ್ಪ ಕೇಳಿ, ಅವಸರ ಮಾಡಿದರೆ ಹೇಗೆ ? ಅದಕ್ಕೋಸ್ಕರ ಲೋಕಾಯುಕ್ತ ಮಾಡಿದ್ದೇವೆ. ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ಸಾಕ್ಷಿ–ಪುರಾವೆಗಳನ್ನು ಕೊಡಿ. ಇದಕ್ಕೆ ಬಹಳ ತೀಕ್ಷ್ಣವಾದಂಥ ಅಧಿಕಾರವನ್ನು ಕೊಟ್ಟಿದ್ದೇವೆ. ಸ್ವಾಮಿ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ಬಹಳ ವಿನಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರನ್ನೂ ಶಿಪ್ತಿತಸ್ಥ ಎಂದು ಸಾಕ್ಷಿ ಕೊಡುವುದಕ್ಕೆ ನಮ್ಮ ಸಮಾಜದಲ್ಲಿ ಜನ ಮುಂದೆ ಬರುವುದಿಲ್ಲ. ಈ ದೇಶದ ಸಂವಿಧಾನ, ಈ ದೇಶದ ಕಾನೂನು ಎಲ್ಲಿಯವರೆಗೆ ಈಗಿರುವ ಹಾಗೆ ಇರುತ್ತದೆಯೋ ಅಲ್ಲಿಯವರೆಗೆ ಸಾಕ್ಷಿ–ಪುರಾವೆಗಳು ಇಲ್ಲದೆ ಯಾರಿಗೂ ಶಿಕ್ಷೆ ಮಾಡುವುದಕ್ಕೆ ಅವಕಾಶವಿಲ್ಲ. ಹೇಗೆ ಮಾಡುತ್ತೀರಿ ? ಆಪಾದನೆ ಮಾಡುವುದು ಸುಲಭ, ಆದರೆ ಆ ಆಪಾದನೆಯನ್ನು ಪುಷ್ಟೀಕರಿಸತಕ್ಕಂಥ, ಸಾಬೀತು ಮಾಡತಕ್ಕಂಥ ಜವಾಬ್ದಾರಿಯನ್ನು ಹೊತ್ತಂಥ ಜನ ಹೊರಗೆ ಬರುವುದಿಲ್ಲ. ನಮಗೆ ಏಕೆ, ನಮಗೆ ಏಕೆ ಎಂದು ಹೊರಗೆ ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಂದವರಿಗೆ ರಕ್ಷಣೆ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ರಕ್ಷಣೆ ಎಲ್ಲ ಎಂದು ಯಾರೂ ಹೇಳಿದ್ದಾದು. ಇಲ್ಲಿ ರಕ್ಷಣೆ ಇಲ್ಲ ಅಂತ. ನಾನು ರಕ್ಷಣೆ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬಂದರೆ ಕೈಕಾಲು ಮುರಿದು ಹಾಕುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಾಗಾದರೆ ಒಂದು ಕೆಲಸ ಮಾಡಿ. ಬೇರೆ ದೇಶದವರು ನಮ್ಮ ಮೇಲೆ ಲಗ್ಗೆ ಎತ್ತಿ ಬಂದು ನಮ್ಮನ್ನು ಹೊಡೆದಾಗ, ನಾವು ಮನೆಯೊಳಗೆ ಕುಳಿತುಕೊಂಡರೆ ನಮ್ಮ ದೇಶದ ಪರಿಸ್ಥಿತಿ ಏನಾಗುತ್ತದೆ ಎಲ್ಲಾದರೂ ಒಂದು ಕಡೆ ಹೊಡೆಯೆತಕ್ಕ ಜವಾಬ್ದಾರಿಯನ್ನು ನಾವು ಮಾಡಬೇಕಾಗುತ್ತದೆ ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ. ಜನ ಸಮಸ್ಯೆಗಳನ್ನು ತೆಗೆದುಕೊಂಡು ಬರುತ್ತಾರೆ. ಹೆಂಡತಿ, ಮಕ್ಕಳ ಸಮಸ್ಯೆಯನ್ನು ನೋಡಿ ಎಂದು ಹೇಳುತ್ತಾರೆ ಇದು ಮಾನ್ಯ ಖಾರ್ಗೆಯವರಿಗೆ ಗೊತ್ತಿಲ್ಲದೇ ಇರತಕ್ಕ ವಿಚಾರವಲ್ಲ. ಆದರೆ ಸಮಾಜದಲ್ಲಿರತಕ್ಕಂಥ ಸಾಮಾನ್ಯವಾಗಿ ಎಲ್ಲಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಪರಿಹಾರವನ್ನು ಕಂಡುಹಿಡಿಯತಕ್ಕಂಥ ಮತ್ತು ಅನ್ಯಾಯಕ್ಕೆ ವಿರುದ್ಧವಾಗಿ ನಡೆಯತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಆದಾಗ ಸಾಕ್ಷಿ–ಪುರಾವೆಗಳನ್ನು ಕೊಡತಕ್ಕಂಥ ಒಂದು ಬುದ್ಧಿ ನಮ್ಮ ಜನಕ್ಕೆ ಬರಬೇಕು ಎಂದು ನಾನು ಆಸೆ ಪಡುತ್ತೇನೆ. ಆ ಮೇಲೆ ಸರ್ಟಿಫೈ ತಿದ್ದುಪಡಿ ಎಂದು ಹೇಳಿದ್ದಾರೆ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಸ್ಟೇಟ್‌ನವರು ಅವೆಂಡ್‌ಮೆಂಟ್ ಮಾಡುವುದಕ್ಕೆ ಅವಕಾಶ ಇದೆ. ಇಂಥಾದ್ದು, ಇಂಥಾದ್ದು ಎಂದು ಹೇಳಿ ಆಫಪಾ ಪಾಯಿಂಟ್ ಬೈ ಪಾಯಿಂಟಾದರೂ ಕಳಿಸಿದರೆ I will get them examined and let me see what can be done. ಸನ್ಮಾನ್ಯ ಅಧ್ಯಕ್ಷರೆ, ಲೀಗಲ್ ಏಯ್ಡ್ ಕೊಡಬೇಕು ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲಿ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಇಂತಹ ಕಡೆ ಎಷವರಿದ್ದಾರೆ ಲೀಗಲ್ ಏಯ್ಡ್ ಕೊಡಬೇಕು ಎಂದು ಹೇಳಿದರೆ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಈ ಮೇಲೆ ಡಾಕ್ಟರ್ ತಿಮ್ಮೇಗೌಡರು ಜಸ್ಟ್ ಮಾತ್ರ ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಷನ್‌ನಲ್ಲಿ ಹೇಳಿದ್ದೀರಿ ನಮ್ಮ ಅಮೆಂಡ್‌ಮೆಂಟ್‌ನಲ್ಲಿ ಇಲ್ಲ ಎಂದು ಹೇಳಿದ್ದಾರೆ ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಷನ್ಸ್ ಕಾನೂನಂ ಆಗುವುದಿಲ್ಲ. ಕಾನೂನಿನ ಅರ್ಥ ವಿವರಣೆಯನ್ನು ಸೂಕ್ಷ್ಮವಾಗಿ ಅದರಲ್ಲಿ ತೋರಿಸಿದ್ದೇವೆ. ಸನ್ಮಾನ್ಯ ತಿಮ್ಮೇಗೌಡರೆ ನಾನು ಮನವಿಮಾಡುತ್ತೇನೆ, ಪುಟ ಐದನ್ನು ನೋಡಿ. ಪುಟ ಕೊರಲ್ಲಿ ಈಗ ಇರತಕ್ಕ ಕಾನೂನನ್ನು ಅಚ್ಚುಹಾಕಿಸಲಾಗಿದೆ. ಸೆಕ್ಷನ್ ಳರಲ್ಲಿ ಎಂತು ಏನೇ ಲೈನಿನಲ್ಲಿ it is stated thus:

> "describing the land by it survey number, if any, and also by its boundaries and its approximate area shall be published in the Official Gazette and in two daily news-papers circulating in that locality....."

ಅದನ್ನು ಈ ತಿದ್ದುಪಡಿಯೊಳಗೆ ಬಿಟ್ಟಿದ್ದಾರೆ, ಜಾಹಿರಾತಿನಲ್ಲಿ ಹೆಚ್ಚು ಸ್ಥಳ ತೆಗೆದು ಕೊಳ್ಳತಕ್ಕದ್ದು. ಬೌಂಡರೀಸ್ ಅಂದರೆ ಚಿಕ್ಕುಬಂದಿಗೆ ಜಾಸ್ತಿ ಕೊಡತಕ್ಕದ್ದು, ಮಿಕ್ಕ ವಿವರಗಳನ್ನು ಕೊಡಬೇಕೆಂದು ಇದೆ. ಸರ್ವೆ ನಂಬರು ಕೊಡಬೇಕು, ಯಾವ ಊರಿನಲ್ಲಿ ಎಂದು ಕೊಡಬೇಕೆಂದು ಇದೆ. ಬೇರೆ ಅರ್ಥ ಏನೂ ಇಲ್ಲ. ಈ ತಿದ್ದುಪಡಿಯೊಳಗೆ ಏನು ಹೇಳಿದ್ದಾರೆಂದರೆ, ಸೆಕ್ಷನ್ (೪) in 4th line it is mentioned thus:

> "a notification stating the purpose for which the land is needed or is likely to be needed and describing the land by its survey number, if any."

ಸರ್ವೆ ನಂಬರು, ಬೌಂಡರೀಸ್‌ಗೆ ಸಂಬಂಧಪಟ್ಟಂತೆ ಜಸ್ಟ್ ಅರ್ಥದಲ್ಲಿ ಉಪಯೋಗಿಸಿದ್ದಾರೆ. ಇದನ್ನು ಹಾಕಿರುವುದು ಸರಿಯಾಗಿದೆ. ಜಸ್ಟ್ ಎಂದರೆ ಕಾನೂನಿಗೆ ವಿರೋಧವೆಂದು ಅಲ್ಲ. It gives to the Executive authority, the unguided, unrestricted and untrammelled power. ಇದನ್ನು ತಪ್ಪಿಸುವುದಕ್ಕೋಸ್ಕರ ಬೌಂಡರೀಸ್ ಬಿಡಬೇಕು. ಯಾರ ಜಮೀನನ್ನು ಆಕ್ವೈರ್ ಮಾಡಲಾಗಿದೆ. ಅವರಿಗೆ ನೋಟೀಸ್ ಕೊಡಬೇಕು. ಆಫಪಾ ಯಾರು ಸ್ವಾಧೀನದಲ್ಲಿ ಜಮೀನು ಇರುತ್ತದೆಯೋ ಅವರಿಗೂ ನೋಟೀಸ್ ಕೊಡಬೇಕು. ಊರಿನ ಜಾವಡಿಯೊಳಗೆ ಇದನ್ನು ಹಾಕಬೇಕು, ಹೀಗೆ ಮಾಡುವುದರಿಂದ ಜಾಹಿರಾತಿಗೆ ತಗಲತಕ್ಕ ಹಣ ಕಡಿಮೆಯಾಗಿ, ಸರ್ಕಾರಕ್ಕೆ ಏನಾಕಾರಣ ಖರ್ಚು

ಬರುವುದು ತಪ್ಪು ತ್ತದೆಂದು ಮಾತ್ರವಾಗಿದೆ. ಆದ್ದರಿಂದ ಮಾನ್ಯ ತಿಮ್ಮೇಗೌಡರು ಏನು ತಿದ್ದುಪಡಿ ತಂದಿದ್ದಾರೆ ಅದಕ್ಕೆ ಪ್ರೆಸ್ ಮಾಡಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳು ಇದಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದು ಕೂಡ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ. — ಸಾಮಾನ್ಯವಾಗಿ ಎರಡು ಪತ್ರಿಕೆಗಳಲ್ಲಿ ಇದು ಪ್ರಕಟವಾಗುತ್ತದೆ. ಪ್ರತಿ ಜಿಲ್ಲೆಯಲ್ಲಿ. ಪ್ರತಿ ತಾಲ್ಲೂಕಿನಲ್ಲಿ ಸಣ್ಣ ಪತ್ರಿಕೆಗಳು ಏನಿವೆ. ಅವುಗಳಿಗೆ ಕೊಟ್ಟರೆ ಸರ್ಕಾರಕ್ಕೆ ದುಡ್ಡು ಕಡಿಮೆಯಾಗುತ್ತದೆ. ಜನಗಳಿಗೆ ವಿಚಾರ ಕೂಡ ತಿಳಿಯುತ್ತದೆ. ಪ್ರತಿಯೊಂದು ನೋಟಿಫಿಕೇಷನ್ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಬರುತ್ತದೆ.

SRI A. LAKSHMI SAGAR .— "two daily newspapers circulated in that locality". One notification will be published in the local newspaper in that regional language concerning the locality. ಡೆಕ್ಕನ್ ಹೆರಾಲ್ಡ್‌ನಲ್ಲಿ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅನೇಕ ಕಡೆ ಒಂದೇ ಲೋಕಾಲಿಟಿಯಲ್ಲಿ ೧೦-೧೦ ನ್ಯೂಸ್ ಪೇಪರ್ ಹೊರಡುತ್ತವೆ,

ಶ್ರೀ ಎ. ಲಕ್ಷ್ಮೀಸಾಗರ್. — ಬಂದಕ್ಕಿಂತ ಜಾಸ್ತಿ ಬಂದಿರುವುದನ್ನು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ, ಆಕ್ವಿಜೇಷನ್‌ಗೆ ಸಂಬಂಧಪಟ್ಟ ಕೇಸ್‌ಗಳಲ್ಲಿ ಸರ್ಕಾರದ ಹಣವನ್ನು ಪೋಲು ಮಾಡಿದ್ದಾರೆ. ಇದರ ಬಗ್ಗೆ ಸ್ಯಾಂಪಲ್ಲಾಗಿ ವಿಚಾರಣೆ ಮಾಡಿ ಎಂದು ಹೇಳಿದ್ದೆ. ಯು.ಕೆ ಪಿ.. ಹೇಮಾವತಿ, ಹಾರಂಗಿ ಈ ಯೋಜನೆಗಳನ್ನು ತೆಗೆದುಕೊಂಡು ವಿಚಾರಣೆ ನಡೆಸಬಹುದು.

ಶ್ರೀ ಎ. ಲಕ್ಷ್ಮೀಸಾಗರ್. — ತಾವು ಹೇಳುತ್ತಿರುವುದು ಬಹಳ ವೇಗವಾಯಿತು. The suggestion appears to be laudable but how to implement it. ಇದನ್ನು ಇಂಪ್ಲಿಮೆಂಟ್ ಮಾಡುವುದು ಹೇಗೆ? ನಾನೂ ಪ್ರಾಕ್ಟಿಕಲ್ ಮ್ಯಾನ್ ಆಗಿ ನೋಡಿದ್ದೇನೆ. ಎಷ್ಟೋ ಕೇಸುಗಳು ಸಿವಿಲ್ ಕೋರ್ಟ್ ಮುಂದೆ ಬರುತ್ತವೆ. I am a practicalman. I am a practical lawyer. I know what it is How are we to implement it? Where am I to go and make a survey in the project area? Please tell me.

SRI M. MALLIKARJUNA KARGE.— One Land Acquistition officer is sufficient in one project.

SRI A. LAKSHMISAGAR. — I will very genuinely think over this suggestion.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ:

"ಗೌರವನೀಯ ಇತರರ ಭೂ ಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು. — ಖಂಡ ೨ಕ್ಕೆ ಮಾನ್ಯ ಹೆಚ್.ಎಲ್. ತಿಮ್ಮೇಗೌಡರು ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಹೆಚ್ ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ವಿವರಣೆಯನ್ನು ಕೊಟ್ಟು ನನ್ನ ತಿದ್ದುಪಡಿಯನ್ನು ಪಾಸು ಪಡೆಯುತ್ತೇನೆ. ಮಾನ್ಯ ಲಕ್ಷ್ಮೀಸಾಗರ್ ಅವರು

ಕೊಟ್ಟಿಂಥ ಉತ್ತರವನ್ನು ಒಪ್ಪಿಕೊಂಡರೂ ಕೂಡ ಒಂದನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ಸ್ನೇಹಿತರು ಎಲ್ಲರೂ ಕೂಡ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಏನೇನು ತಪ್ಪುಗಳನ್ನು ಮಾಡುತ್ತಾರೆ ಅದನ್ನು ಸರಿ ಮಾಡತಕ್ಕದ್ದನ್ನು ಹೇಳಿರಿ ಎಂದು ಹೇಳಿದರು. ನಾನು ಬೆಂಗಳೂರು ಯೂನಿವರ್ಸಿಟಿಗೆ ಸೆನೆಟ್ ಮೆಂಬರ್ ಆಗಿದ್ದೆ. ಬೆಂಗಳೂರು ಯೂನಿವರ್ಸಿಟಿಗೆ ಸುಮಾರು ೬೦೦ ಎಕರೆ ಅಕ್ವಿಸಿಷನ್ ಆಯಿತು. ಪರಿಹಾರ ಕೊಟ್ಟಿದ್ದು ಮಾರ್ಕೆಟ್ ವ್ಯಾಲ್ಯುನಲ್ಲಿ ಎಷ್ಟು ಜಮೀನಿಗೆ ಪರಿಹಾರ ಸಿಕ್ಕುಶ್ಚಿತ್ತೋ ಅದರ ಮೂರರಷ್ಟು ಪರಿಹಾರವನ್ನು ಕೊಟ್ಟರು. ಅದನ್ನು ನಾವು ಎತ್ತಿ ಹೇಳಿದಾಗ ಇನ್ವೆಸ್ಟಿಗೇಷನ್ ಆಗಿ ಮಾರ್ಕೆಟ್ ವ್ಯಾಲ್ಯು ಆಗ ೬ ಸಾವಿರ ರೂಪಾಯಿಗೆ ಸಿಕ್ಕುತ್ತಿತ್ತು. ಅಕ್ವಿಸಿಷನ್ ಆದಾಗ ೧೮-೨೦ ಸಾವಿರ ರೂಪಾಯಿ ಕೊಟ್ಟಿದ್ದರು. ಈ ರೀತಿ ಕೊಟ್ಟಿದ್ದು ಸಾಬೀತಾದರೂ ಕೂಡ, ಆ ರೀತಿ ತಪ್ಪು ಮಾಡಿದ್ದರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಹೇಳಿ ಲ್ಯಾಂಡ್ ಅಕ್ವಿಸಿಷನ್ ಆಫೀಸರ್‌ಗೆ ಏನೂ ಶಿಕ್ಷೆ ಮಾಡಲಿಲ್ಲ. ಆಗ ಬೆಂಗಳೂರು ಯೂನಿವರ್ಸಿಟಿ ವಿರಿಯಾದಲ್ಲಿ ೧ ಎಕರೆಗೆ ೬ ಸಾವಿರ ರೂಪಾಯಿ ಮಾರ್ಕೆಟ್ ವ್ಯಾಲ್ಯೂನಲ್ಲಿಸಿಕ್ಕುತ್ತಿತ್ತು. ಇವರು ಒಂದು ಎಕರೆಗೆ ೨೦ ಸಾವಿರ ರೂಪಾಯಿ ಪ್ರಕಾರ ಕೊಟ್ಟಿದ್ದರು. ಇದಂ ಎನ್‌ಕ್ವೈರಿ ಆದ ಮೇಲೆ ಸಾಬೀತು ಆಯಿತು. ಹೆಚ್ಚಿಗೆ ಕೊಟ್ಟಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಅಧಿಕಾರ ಇಲ್ಲ ಎಂದು ಏನೂ ಮಾಡಲಿಲ್ಲ. ಆದ್ದರಿಂದ ದಯವಿಟ್ಟು ಅದರ ಜೊತೆ ಏನಾದರೂ ಶಾಮೀಲಾಗಿ ಮಾರ್ಕೆಟ್ ವ್ಯಾಲ್ಯೂಗಿಂತಲೂ ಹೆಚ್ಚು ಪರಿಹಾರ ಕೊಟ್ಟಿದ್ದರೆ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಪ್ರಾವಿಜನ್ ಮಾಡಬೇಕು ಇದ್ದರೆ ಸರ್ಕಾರದ ಮತ್ತು ಇತರ ಹಣ ಲೋಪವಾಗುತ್ತದೆಂದು ಹೇಳಿ ಮಾನ್ಯ ಮಂತ್ರಿಗಳು ಉತ್ತರ ಹೇಳಿರುವುದರಿಂದ ನಾನು ನನ್ನ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.— ತಿದ್ದುಪಡಿಯನ್ನು ಸದನದ ಅನುಮತಿಯಿಂದ ವಾಪಸ್ ಪಡೆಯಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.— ಆ ರೀತಿ ಹಣ ಮಾರ್ಕೆಟ್ ವ್ಯಾಲ್ಯೂಗಿಂತಲೂ ಜಾಸ್ತಿ ಅವಾರ್ಡ್ ಮಾಡತಕ್ಕ ಸನ್ನಿವೇಶಗಳು ಉದಾಹರಣೆಗಳು ಒಂದಲ್ಲ ಸಾವಿರಾರು ಇವೆ. ನಾನು ಲಾಯರ್ ಆಗಿ ಈ ಮಾತನ್ನು ಹೇಳುತ್ತಿದ್ದೇನೆ. ಡಾ. ತಿಮ್ಮೇಗೌಡರಿಗೆ ಒಂದೆರಡು ವಿಚಾರ ಗೊತ್ತಿರಬಹುದು. ಎರಡನೆಯದು ರೆವ್ಯೂಗೆ ಮಂತ್ರಿಗಳಿಗೆ ನೂರಾರು ಕೇಸುಗಳು ಬರುತ್ತಿವೆ. ಅಂತಹವುಗಳ ಮೇಲೆ ಅಪೀಲು ಹೋಗಿದ್ದೇವೆ. ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ನಮ್ಮ ಲೋಕಾಯುಕ್ತ ಆಕ್ಟ್‌ನಲ್ಲಿ ಪ್ರಾವಿಜನ್ ಇದೆ. ಇನ್ನು ಬೇರೆ ಕಾನೂನು ಮಾಡುವ ಬದಲು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಮರಿ ಪವರ್ಸ್ ಕೊಟ್ಟಿದ್ದೇವೆ. We have given summary powers, It is more effective than any other Lokayukta Act in this Country. ಅಷ್ಟನ್ನೂ ಕೊಟ್ಟಿದ್ದೇವೆ, ಅದರ ಉಪಯೋಗವನ್ನು ಜನರು ಪಡೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಖಂಡ 2 ಮತ್ತು 3

ಅಧ್ಯಕ್ಷರು.—"ಖಂಡ ೨ ಮತ್ತು ೩ನೇ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮಂತ್ರಿಗಳು) ೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ "೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1988ನೇ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ೧೯೮೮ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುವಾಗ ಲೀಗಲ್ ಏಯ್ಡ್ ಬೋರ್ಡ್‌ಗೆ ಅಗ್ರಿಕಲ್ಚರ್ ಲೇಬರ್‌ನ ಒಂದು ರೆಪ್ರೆಸೆಂಟೇಷನ್‌ನ್ನು ಕೊಡಬೇಕು, ಇದಕ್ಕೆ ಈ ತಿದ್ದುಪಡಿಯನ್ನು ವ್ಯವಸ್ಥೆ ಮಾಡಬೇಕೆಂದು ಕೇಳಿದ್ದರು ಅವರು ಹೇಳಿದ್ದನ್ನು ನಾನು ಒಪ್ಪಿಕೊಂಡಿದ್ದೆ. ಆದರ ಪ್ರಕಾರ ಇದರಲ್ಲಿ ನಾನು ತಿದ್ದುಪಡಿ ಮಾಡುತ್ತಿದ್ದೇನೆ. ೯ ಜನ ಎಂದು ಈ ಸಮಿತಿಗೆ ಏನು ನಿಗದಿ ಮಾಡಿದೆ ಅದಕ್ಕೆ ಇನ್ನೂ ಒಂದನ್ನು ಸೇರಿಸಿ ೧೦ ಜನ ಇರಬೇಕೆಂದು ಮಾಡಬೇಕಾಗಿದೆ. ಆದ್ದರಿಂದ ಈ ಅಗ್ರಿಕಲ್ಚರ್ ಲೇಬರರ್ ರೆಪ್ರೆಸೆಂಟೇಷನ್‌ನ್ನು ಈ ಸಮಿತಿಯಲ್ಲಿ ಸೇರಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಇದಕ್ಕೆ ತಾವು ಅನುಮತಿ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಫೈನಾನ್ಷಿಯಲ್ ಕಮಿಟ್‌ಮೆಂಟ್ ಏನೂ ಇಲ್ಲವಾದ್ದರಿಂದ ಇದನ್ನು ಮಾಡಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ನಾನು ಅಭಿನಂದಿಸುತ್ತೇನೆ ಈ ಲೀಗಲ್ ಏಯ್ಡ್ ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡಿರತಕ್ಕದ್ದು ಮೂಲಭೂತವಾಗಿ ಬಡವರಿಗೆ ಅಗ್ರಿಕಲ್ಚರ್ ಲೇಬರರ್ಸ್‌ಗೆ ಕಾನೂನಿನ ನೆರವು ಸಿಕ್ಕಬೇಕೆಂದು ಉದ್ದೇಶ ಇಟ್ಟುಕೊಂಡು ಮಾಡಿರತಕ್ಕದ್ದು. ಸರ್ಕಾರದವರು ಇದರ ಬಗ್ಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ, ಇದರ ಬಗ್ಗೆ ಒಂದು ಪುಸ್ತಕವನ್ನೂ ಕೂಡ ಹೊರಡಿಸಿದ್ದಾರೆ. ಅದನ್ನು ನಾನು ನೋಡಿದ್ದೇನೆ. ಅದು ಕಾರ್ಯರೂಪಕ್ಕೆ ಬರಬೇಕು ಆದರೆ ನನಗೆ ತಿಳಿದಂತೆ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ಇದಕ್ಕೆ ಒಂದು ಪ್ರಮುಖ ಕಾರಣವೇನೆಂದರೆ ಈ ಕಾನೂನು ನೆರವು ಮಂಡಲಿಯಿಂದ ಬಡವರಿಗೆ ಏನೇನು ಅನುಕೂಲಗಳನ್ನು ಮಾಡಬೇಕೆಂದಿದೆ, ಏನೇನು ಕೆಲಸಕಾರ್ಯಗಳನ್ನು ಇದು ಮಾಡುತ್ತಿದೆ ಎನ್ನುವ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಲು ಇರತಕ್ಕ ಪ್ರಚಾರ ಬಹಳ ಕಡಿಮೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾನೂ ಮತ್ತು ನನ್ನ ಇನ್ನೂ ಕೆಲವು ಸ್ನೇಹಿತರು ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಸಂಚರಿಸುತ್ತಿರುವಾಗ ಇದನ್ನು ಗಮನಿಸಿದ್ದೇವೆ. ಇದರ ಬಗ್ಗೆ ಪ್ರಚಾರ ಬಹಳ ಕಡಿಮೆ ಇರುವುದರಿಂದ ಹೆಚ್ಚಿನ ಪ್ರಚಾರಕಾರ್ಯವನ್ನು ಕೈಗೊಳ್ಳಬೇಕು ಮುಖ್ಯವಾಗಿ ಈ ಕಾನೂನು ನೆರವು ಮಂಡಲಿಯಲ್ಲಿ ಅಗ್ರಿಕಲ್ಚರ್ ಲೇಬರರ್‌ಗೆ ಒಂದು ಪ್ರಾತಿನಿಧ್ಯ ಇರಬೇಕೆಂದು ಕೇಳಿಕೊಂಡಿದ್ದೆ. ಅದರಂತೆ ತಾವು ಮಾಡಿದ್ದೀರಿ ಆದ್ದರಿಂದ ತಪ್ಪಾಗೆ ಅಭಿನಂದಿಸಿ, ಈ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.